
# ಪಂಚ ಭೂತ ಪ್ರಪಂಚ

(ಯಕ್ಷಗಾನ)

ಅಂಬಾತನಯ ಮುದ್ರಾಡಿ



# ಪಂಚಭೂತ ಪ್ರಪಂಚ

ಕವಿ

ಅಂಬಾತನಯ, ಮುದ್ರಾಡಿ

ಪ್ರಕಟಣೆ

**ಕರ್ನಾಟಕ ಯಕ್ಷಗಾನ ಅಕಾಡೆಮಿ**

ಕನ್ನಡ ಭವನ, ೨ನೆಯ ಮಹಡಿ, ಚಾಲುಕ್ಯ ವಿಭಾಗ, ಬೆಂಗಳೂರು- ೫೬೦ ೦೦೨

ಪಂಚಭೂತ ಪ್ರಪಂಚ : ಯಕ್ಷಗಾನ

ಕವಿ : ಅಂಬಾತನಯ ಮುದ್ರಾಡಿ
'ಅಕ್ಷರ'
ಅಂಚೆ: ಮುದ್ರಾಡಿ ೫೭೬೧೧೨, ಉಡುಪಿ ಜಿಲ್ಲೆ.

ಪ್ರಕಟಣೆ : **ಕರ್ನಾಟಕ ಯಕ್ಷಗಾನ ಅಕಾಡೆಮಿ,**
ಕನ್ನಡ ಭವನ ೨ನೆಯ ಮಹಡಿ, ಚಾಲುಕ್ಯ ವಿಭಾಗ,
ಬೆಂಗಳೂರು-೫೬೦ ೦೦೨

ಪ್ರಕಟಣವರ್ಷ : ೨೦೧೯

ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.

ಪುಟಗಳು IX + 26

ಬೆಲೆ : ರೂ . **40/-**
(ನಲವತ್ತು ರೂಪಾಯಿ)

ಮುಖಪುಟ ವಿನ್ಯಾಸ : ಚಂದ್ರಕಾಂತ ಬಜಗೋಳಿ

ಮುದ್ರಕರು : ಸಮೃದ್ಧಿ ಪ್ರಿಂಟರ್ಸ್, ಮುದ್ರಾಡಿ

# ಮುನ್ನುಡಿ

'ಪಂಚಭೂತ ಪ್ರಪಂಚ' ಎಂಬುದು ಅಂಬಾತನಯ ಮುದ್ರಾಡಿ ಅವರ ಕವಿಹೃದಯ 2018ರ ಮುಂಗಾರು ಮಳೆಯಲ್ಲಾದ ಜಲ ಪ್ರಳಯದ ಬಗೆಗೆ ಹೊಂದಿದ ಪ್ರತಿಸ್ಪಂದನದ ಪ್ರತಿಬಿಂಬ. ಇದೊಂದು 'ಗೀತರೂಪಕ' ಬಹುಶ: ಶಾಲೆ ಶಾಲೆಗಳಲ್ಲೂ ಮಕ್ಕಳಲ್ಲಿ ಪರಿಸರ ಪ್ರೀತಿಯನ್ನು ಬಿತ್ತಲು ಅನುಕೂಲಿಸುವ ಉತ್ತಮ ರಂಗಕೃತಿ. ಇದಕ್ಕೆ ಕವಿ ಆಯ್ದುಕೊಂಡಿರುವ ಮಾಧ್ಯಮ ಯಕ್ಷಗಾನದ ಪದಬಂಧಗಳು ಯಕ್ಷಗಾನದ ಪರಿಕರಗಳನ್ನು ಬಳಸಬಹುದಾದ, ಬೇರೆ ರಂಗತಂತ್ರಗಳ ಮೂಲಕವೂ ಅಭಿನಯಿಸಬಹುದು. ರೂಪಕ ಕೃತಿ ಇದು.

ಇಲ್ಲಿ ಪದಗಳಿಗೆ ಅವರು ಸಂಭಾಷಣೆಯನ್ನು ಬರೆದಿದ್ದಾರೆ. ತುಂಬ ಸರಳ ಮಾತುಗಳಿಂದ ಪಂಚಭೂತಗಳ ಪ್ರಾಮುಖ್ಯತೆಯನ್ನು ಕವಿ ಪ್ರತಿಪಾದಿಸಿದ್ದಾರೆ. ನೆಲ, ಜಲ, ವಾಯು, ಆಕಾಶ ಇವುಗಳನ್ನು ಮನುಷ್ಯ ಮಲಿನಗೊಳಿಸಿರುವುದೇ ಹವಾಮಾನ ಪ್ರತಿಕೂಲವಾಗಲು ಕಾರಣ ಎಂದು ಕವಿ ಬೆಟ್ಟು ಮಾಡಿದ್ದಾರೆ.

ಮನುಷ್ಯನಿಗೆ ಭೂಮಿ ವಾಸಯೋಗ್ಯವಾಗಬೇಕಾದರೆ ಅವನು ತನ್ನ ಖಾಸಗಿ ಸಂಪತ್ತಿನವೃದ್ಧಿಗೆ ಕಡಿವಾಣ ಹಾಕಬೇಕು ಎಂಬ ಸಂದೇಶ ಇಲ್ಲಿದೆ. ಇದು ಸಾಕಾರಗೊಳ್ಳಲು ಬದುಕನ್ನು ಸರಳವಾಗಿ ನಡೆಸುವ ಸಂಕಲ್ಪ ಮಾಡಬೇಕಾಗುತ್ತದೆ. ನಡೆದು ಹೋಗಬಹುದಾದ ದೂರವನ್ನು ವಾಹನದ ಸಹಾಯವಿಲ್ಲದೆ ಕ್ರಮಿಸುವುದನ್ನು ಮರಳಿ ರೂಢಿಸಬೇಕಾಗಿದೆ. ಹಾದಿಯಲ್ಲಿ ನಡೆಯುವುದು ಆಢ್ಯತೆಗೆ ಕುಂದಲ್ಲ ಎಂಬ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗಿದೆ. ರಾಷ್ಟ್ರಪಿತನಿಂದ ಸ್ವಾತಂತ್ರ್ಯ ಪ್ರಾಪ್ತಿ ಮತ್ತು ಪಾಲನೆ ಇವುಗಳಿಗಾಗಿ ದೊರಕಿರುವ ಸಂದೇಶವೂ ಇದೇ. ಈ ಸಂದೇಶ ಈಗ ಹಿಂದಿಗಿಂತ ಹೆಚ್ಚು ಪ್ರಸ್ತುತ ಆಗುತ್ತಿದೆ ಎಂಬುದೇ ಪಂಚಭೂತಗಳು ತಮ್ಮ ಕೋಲಾಹಲದ ಮೂಲಕ ಕಲಿಸಿದ ಪಾಠ.

ಆದರೆ ವಾಹನದಲ್ಲಿ ಓಡಾಡುವುದು ಆವಶ್ಯಕತೆಗಿಂತ ಹೆಚ್ಚಾಗಿ ನಡೆದಾಡುವ ಜನರ ನೋಟ, ಭೇಟಿ, ಮಾತುಕತೆ ತಪ್ಪಿಸುವುದಕ್ಕಾಗಿ ಎಂಬ ವಾಸ್ತವವನ್ನು ಕಡೆಗಣಿಸುವಂತಿಲ್ಲ. ಅಕ್ರಮ ಮಾಡದವನಿಗೆ ಜನರ ನೋಟ, ಭೇಟಿ, ಮಾತುಕತೆಗಳಿಂದ ಏನು ತೊಂದರೆ ಇದೆ? ದೊಡ್ಡ ಮಟ್ಟದ ಉತ್ಪಾದನೆಗೆ ಯಂತ್ರಗಳು ಅವಶ್ಯ ನಿಜ. ಆದರೆ ಪೇಟೆಯ ಸರಕುಗಳ ಭರ್ತಿ ನೋಡಿದರೆ ಆವಶ್ಯಕತೆಗಿಂತ ಹೆಚ್ಚಿನದಾದ, ಆವಶ್ಯಕ ಮತ್ತು ದುಂದಿನ ಸಾಮಗ್ರಿಗಳ, ಉತ್ಪಾದನೆ ಅಂದರೆ 'ಪ್ರಕೃತಿಯ ಉಪಯೋಗ' ನಡೆಯುತ್ತಿದೆ. ಎಂದರ್ಥ. ಎಷ್ಟು ಬೇಕೊ ಅಷ್ಟೆ ಉತ್ಪಾದನೆ ಮಾಡಿದರೆ ಹಲವು

ಪಿಡುಗುಗಳು ದೂರವಾದವು. ಬೀದಿಯಲ್ಲಿ ನಡೆದಾಡುವವರ ನಡುವಣ ತಾರತಮ್ಯಕ್ಕೂ ಕಡಿವಾಣ ಬೀಳುತ್ತದೆ.

ಪಂಚಭೂತಗಳ ಕೋಲಾಹಲವನ್ನು ಅರ್ಥಮಾಡಿದರೆ ಬಹುಶಃ ಇದೇ ಸಂದೇಶವನ್ನು ನಾವು ಪಡೆಯುವುದು. ಪ್ರಕೃತಿಯ ಬಳಕೆಯಿಲ್ಲದೆ ಮಾನವ ಬದುಕುವಂತಿಲ್ಲ ಪ್ರಕೃತಿಯ ಬಳಕೆಯಿಂದ ಖಾಸಗಿ ಸಂಪತ್ತು ಹೆಚ್ಚುತ್ತದೆಂದು ಪ್ರಕೃತಿಯ ಭಂಜನವನ್ನು ಖಾಸಗಿಯಾಗಿಯೂ. ಸರಕಾರಿ ಯೋಜನೆಗಳಿಂದಲೂ ನಿರಂತರ ಮಾಡಲಾಗುತ್ತಿದೆ.ಬಂಡೆ, ಕಾಡು, ಗುಡ್ಡ, ಬೆಟ್ಟ, ಕಂದರ, ತೊರೆ, ಮಡು, ಹೊಳೆ, ಇವೆಲ್ಲವೂ ಪ್ರಕೃತಿ ಸಮತೋಲನಕ್ಕೆ ಅವಶ್ಯ ಆಹಾರ, ಇಂಧನ, ಗೃಹ, ಬಟ್ಟೆ ಬರೆಗಳ ಅಮಿತ ಉತ್ಪಾದನೆ, ನಿರ್ಯಾತ, ಮಿತಿಮೀರಿದ ಬಳಕೆಗಾಗಿ ಪ್ರಾಕೃತಿಕ ಸಮತೋಲನ ಕೆಡಿಸಿದರೆ ಮನುಜಕುಲವೇ ನಿರ್ನಾಮವಾಗದುಳಿಯದು.

ಇದಕ್ಕೆ ಇರುವ ಪರಿಹಾರ ಮಾರ್ಗವನ್ನು ಚಿಂತಿಸಲು ಇದೆ. ಖಾಸಗಿ ಪ್ರಯಾಣ ಸೌಕರ್ಯವೆನಿಸಿದ ಕಾರುಗಳ ಸಂಖ್ಯೆ ಕಡಿಮೆ ಮಾಡಿ ಸಾಧ್ಯವಿರುವಷ್ಟೂ ಬಸ್ಸುಗಳ ಮೂಲಕವೆ ಪ್ರಯಾಣ ರೂಢಿಸುವುದು, ಜೈವಿಕ ಗೊಬ್ಬರ, ಕೀಟನಾಶಕ ಬಳಸಿ ಕೈತೋಟಗಳಲ್ಲಿ ತಮ್ಮ ಆವಶ್ಯಕತೆಯ ತರಕಾರಿ, ಹೂ, ಹಣ್ಣುಗಳನ್ನು ಪಡೆಯುವುದು, ಅದಕ್ಕೆ ಬೇಕಾದ ಆಧುನಿಕ ತಂತ್ರಜ್ಞಾನಗಳಿಸುವುದು, ಮರಳಿ ಸಹಬಾಳ್ವೆಯ ತತ್ತ್ವ ನಿಷ್ಠೆ ಪಾಲಿಸಿ ಗೃಹ ವಿಭಜನವನ್ನು ತಪ್ಪಿಸುವುದು, ನಮ್ಮ ಕೈಯೆಟುಕಿನ ಆರ್ಥಿಕತೆಯಲ್ಲಿ ಸರಳ ಜೀವನ ರೂಢಿಸುವುದು, ನಮ್ಮ ಮನೋರಂಜನೆಯನ್ನು ನಮ್ಮದೆ ಹಾಡು ಕುಣಿತಗಳಿಂದ ಮಾಡಿಕೊಳ್ಳುವುದು. ಪುಸ್ತಕ ಓದಿನ ಸಂಸ್ಕೃತಿಯನ್ನು ಮರಳಿ ರೂಢಿಸುವುದು ಇತ್ಯಾದಿ ಕೆಲ ವಿಚಾರಗಳು ಹೊಳೆಯುತ್ತವೆ. ಇನ್ನೂ ಹಲವು ನಿಮಗೂ ಹೊಳೆದಾವು.

ಈ ಎಲ್ಲ ಮಾತಿಗೆ ಸಾಕ್ಷಿಯಾಗಿ ಕವಿಯ ಈ ಪದವನ್ನು ನೋಡಿರಿ

ಸಹನೆಗೆ ಮಿಗಿಲಾದ ಶಕ್ತಿ ಬೇರಿಲ್ಲವು।<br>
ತಹುದೆಲ್ಲ ತೆರನಾದ ಗೆಲವು ॥<br>
ಬಹುಜನರೀ ಸತ್ಯ ತಿಳಿಯದೆ ಕೆಟ್ಟರು।<br>
ಇಹುಸುಖದಾಶೆಯುಳ್ಳವರು॥

ಮಿತ್ರರಾದ ಅಂಬಾತನಯ ಮುದ್ರಾಡಿಯವರ ರೂಪಕ ಕೃತಿ ಇಂಥ ವಿಚಾರಗಳಗನಿ. ಈ ಕೃತಿಯಲ್ಲಿ ಕತೆ ಸಣ್ಣದು. ಪಂಚಭೂತಗಳಾದ ನೆಲ, ನೀರು, ಬೆಳಕು, ಗಾಳಿ, ಗಗನ

ಇವುಗಳು ಪರಸ್ಪರಾವಲಂಬಿಗಳು, ಅವುಗಳನ್ನು ಗೌರವಿಸಿದರೆ, ಮಾನವನಿಗೆ ನೆಲೆ ಇದೆ, ಅದಲ್ಲದಿದ್ದರೆ ಪ್ರಾಕೃತಿಕ ವಿಕೋಪ ಹಾಗೂ ಜನನಾಶ ಕಟ್ಟಿಟ್ಟದ್ದು ಎಂಬುದನ್ನು ಸಾರಲು ಕವಿ ಪಂಚಭೂತಗಳಲ್ಲದೆ ಧನಿಕ, ರೈತ, ಫಕೀರ, ಜ್ಯೋತಿಷಿ, ಭೂ ವಿಜ್ಞಾನಿ, ಹವಾಮಾನ ತಜ್ಞ ಇವರೆಲ್ಲ ಪಾತ್ರಗಳನ್ನು ರಂಗಕ್ಕೆ ತಂದಿದ್ದಾರೆ. ಅಂದರೆ ಅಲೌಕಿಕ, ಲೌಕಿಕ ಪಾತ್ರಗಳ ಬೆರಸು ಇಲ್ಲಿದೆ. ಇದು ಜನ ಸಾಮಾನ್ಯರಿಗೆ ಸಂದೇಶ ತಲುಪಿಸಲು ಉತ್ತಮ ವಿಧಾನ. ಇದು ಯಕ್ಷಗಾನವೆ ಅಲ್ಲವೆ ಎಂಬ ಚರ್ಚೆಗೆ ಅತೀತವಾದ ರಂಗಕೃತಿ.

ಹಿರಿಯ ಗೆಳೆಯ ಮುದ್ರಾಡಿಯವರೊಂದಿಗಿನ ನನ್ನ ಸಹವಾಸಕ್ಕೆ 60 ವರ್ಷಗಳಿಗೂ ಹೆಚ್ಚಿನ ಹಳೆತನವಿದೆ. ಗೆಳೆತನ ಇಷ್ಟು ಬಾಳುವುದು ಈ ಕಾಲದಲ್ಲಿ ದುರ್ಲಭ. ಅವರು ನಮ್ಮೊಂದಿಗಿರುವ ತಾಳ್ಮೆ ಸಾಹಸಗಳ ನಿಧಿ. ನನ್ನ ಹಲವು ಮಾನ, ಸಮ್ಮಾನಗಳ ಹಿಂದಿನ ಪ್ರೇರಕ ಶಕ್ತಿ ಅವರಾಗಿದ್ದರು. ನನ್ನ ಹಲವು ಯಕ್ಷಗಾನ ಕೃತಿಗಳಿಗೆ ಮೆಚ್ಚಿಗೆ, ಪ್ರೋತ್ಸಾಹ ಅವರಿಂದ ಬಂದಿವೆ.

ಈ ಆತ್ಮೀಯತೆಯನ್ನು ಬದಿಗಿಟ್ಟು ನೋಡಿದರೆ ಅಂಬಾತನಯರ ವ್ಯಕ್ತಿತ್ವ ಒಂದು ಅಚ್ಚರಿ. ಅವರು ಪ್ರಾಥಮಿಕ ಶಿಕ್ಷಕರಾಗುವಲ್ಲಿಗೆ ಪರಿಮಿತಗೊಂಡಿರುವುದು ಬಹುಶಃ ಅವರ ಆಧ್ಯಾತ್ಮಿಕ ಚಿಂತನೆಯ ಅಭಿವ್ಯಕ್ತಿ ಇರಬಹುದು. ಯಕ್ಷಗಾನ ಅರ್ಥಧಾರಿಯಾಗಿ, ಹರಿದಾಸರಾಗಿ, ಜಿನದಾಸರಾಗಿ, ಶಿಕ್ಷಕಗುರುವಾಗಿ, ಸಾಮಾಜಿಕ ರಂಗದ ವಾಗ್ಮಿಯಾಗಿ ಅಷ್ಟಾವಧಾನದ ಪೃಚ್ಛಕರಾಗಿ, ಸಾಹಿತ್ಯ, ಸಂಸ್ಕೃತಿಗಳ ಸಂಘಟಕರಾಗಿ ಅವರೇರಿದ ಎತ್ತರ ಅಸಾಧಾರಣವಾದುದು. ಇದರಲ್ಲಿ ಅವರೊಳಗಿನ ಕವಿ ಮತ್ತು ದಾರ್ಶನಿಕರು ಒಂದಿಷ್ಟು ಹಿಂದಕ್ಕೆ ಸರಿದು ಕುಳಿತಿರುವುದು ಸುಸ್ಪಷ್ಟ.

ಅವರಲ್ಲಿ ಕಾವ್ಯ ರಚನಾ ಶಕ್ತಿ ಅಪಾರವಾಗಿದೆ. ಸುಮಾರು ನಲ್ವತ್ತೆರಡು ಪದಗಳು, ಅದಕ್ಕೆ ಅವರೇ ರಚಿಸಿದ ಸಂಭಾಷಣೆ ಪರಿಸರ ಮಾಲಿನ್ಯದ ಬಗೆಗೆ ಜನಜಾಗೃತಿ ಮೂಡಿಸಲು ಯೋಗ್ಯ ಮಾಧ್ಯಮವಾದ ರೂಪಕವಾಗಿ ನಮ್ಮ ಕೈಗೆ ಬಂದಿದೆ. ಅದನ್ನು ಮನಮನದಲೂ, ಶಾಲೆ, ಯುವಕ ಸಂಘ, ರಂಗ ಸಂಸ್ಥೆಗಳಲ್ಲೂ ಯುಕ್ತ ಸಂಗೀತ, ನಾಟ್ಯ ಸಂಯೋಜನೆಯೊಂದಿಗೆ ಕಾಯ್ದುಕೊಳ್ಳೋಣ.

**ಕೆ.ಎಂ.ರಾಘವ ನಂಬಿಯಾರ್**

# ಅಧ್ಯಕ್ಷರ ಮಾತು

ಉತ್ತಮವಾದ ಸಾಹಿತ್ಯದ ಸೃಷ್ಟಿ ಮತ್ತು ಪ್ರಸಾರಗಳಿಗೆ ಪ್ರೋತ್ಸಾಹ ನೀಡುವುದು ಆಕಾಡೆಮಿಗಳ ಕರ್ತವ್ಯದ ಭಾಗವೇ ಆಗಿದೆ. ಯಕ್ಷಗಾನ ಆಕಾಡೆಮಿಯು ಕೂಡ ತನ್ನ ಕರ್ತವ್ಯಪಾಲನೆಯಲ್ಲಿ ಹಿಂದೆ ಬಿದ್ದಿಲ್ಲವೆಂಬುದು ಸಮಾಧಾನದ ಸಂಗತಿ. ಈಗಾಗಲೇ ಯಕ್ಷಗಾನಕ್ಕೆ ಸಂಬಂಧಿಸಿದ ಹಲವಾರು ಕೃತಿಗಳು ಪ್ರಕಟವಾಗಿವೆ. ಇನ್ನಷ್ಟು ಪ್ರಕಟಣೆಯ ವಿವಿಧ ಹಂತಗಳಲ್ಲಿವೆ. ಯಕ್ಷಗಾನ ಸಾಹಿತ್ಯದ ಸಮೃದ್ಧಿಗೆ ತನ್ನದೇ ಆದ ಕಾಣಿಕೆಯನ್ನು ಸಲ್ಲಿಸುವ ಕೈಂಕರ್ಯದಲ್ಲಿ ನಿರತವಾಗಿದೆ.

ಪ್ರಸ್ತುತ ಅಂಬಾತನಯ ಮುದ್ರಾಡಿಯವರ 'ಪಂಚಭೂತಪ್ರಪಂಚ' ಒಂದು ವಿಶಿಷ್ಟವಾದ ಕೃತಿ. ಅಂಬಾತನಯರ ಕವಿಹೃದಯ ಪರಿಸರದ ಮಾಲಿನ್ಯ, ಪ್ರಕೃತಿಯ ಮೇಲಾಗುತ್ತಿರುವ ದೌರ್ಜನ್ಯಗಳನ್ನು ಕಂಡು ಕಳವಳಿಸಿದಾಗ ಹುಟ್ಟಿದ್ದು ಈ ಕಾವ್ಯ. ಅದು ಯಕ್ಷಗಾನ ಛಂದಸ್ಸಿನಲ್ಲಿ ಅವತರಿಸಿದೆ. ಯಕ್ಷಗಾನವಾಗಲಿ, ಯಕ್ಷಕವಿಗಳಾಗಲಿ ವರ್ತಮಾನ ಪ್ರಪಂಚಕ್ಕೆ ವಿಮುಖರಾದವರಲ್ಲವೆಂಬುದು ಇಲ್ಲಿ ಪ್ರಮಾಣಿತವಾಗಿದೆ. ಅದು ಜೀವಂತ ಕಲೆಯ ಲಕ್ಷಣವೂ ಹೌದು. ಇಲ್ಲಿ ಪದ್ಯಗಳು ಮಾತ್ರವಲ್ಲ, ಅರ್ಥವೂ ಇರುವುದರಿಂದ ಕೃತಿಯ ಉಪಯುಕ್ತತೆ ಹೆಚ್ಚಿದೆ. ಇದನ್ನು ರಂಗಕ್ಕೆ ಅಳವಡಿಸುವವರಿಗೆ ಸಹಕಾರಿಯಾಗಿದೆ. ಯಕ್ಷಗಾನ ಪ್ರದರ್ಶಕರು, ಕಲಾವಿದರು ಈ ಕೃತಿಯನ್ನಯ ಯಥಾಯೋಗ್ಯವಾಗಿ ಬಳಸಿಕೊಂಡರೆ ಬರೆದುದು ಸಾರ್ಥಕವಾದೀತು. ಆಕಾಡೆಮಿಗೆ ತಮ್ಮ ಕೃತಿಯನ್ನು ಪ್ರಕಟಿಸುವ ಅವಕಾಶವನ್ನು ನೀಡಿದ ಹಿರಿಯ ಕವಿ, ವಿದ್ವಾಂಸರಾದ ಅಂಬಾತನಯಯವರಿಗೆ ಶುಭವನ್ನು ಹಾರೈಸುತ್ತೇವೆ.

ಎಂ.ಎ ಹೆಗಡೆ

ಅಧ್ಯಕ್ಷರು

# ಅರಿಕೆ

'ಪಂಚಭೂತ ಪ್ರಪಂಚ' ಯಕ್ಷಗಾನ ರಂಗಕ್ಕೆ ವಿನೂತನವಾದ ಕಥಾನಕ. ಪೃಥ್ವಿ, ಅತ್ಮ, ಅಗ್ನಿ, ವಾಯು ಆಕಾಶಗಳೇ ಪಂಚಭೂತಗಳು. ಈ ಪಂಚಭೂತಗಳಿಲ್ಲದೆ ಬದುಕಿಲ್ಲ. ಮನುಷ್ಯನಷ್ಟೆ ಅಲ್ಲ, ಯಾವ ಜೀವಕೋಟಿಯೂ ಬದುಕುತ್ತಿರುವುದು ಪಂಚಭೂತಗಳ ಆಧಾರದಿಂದ ಪ್ರ-ಪ್ರಂಚ ಪ್ರಪಂಚವೆನಿಸಿರುವುದೇ ಈ ಪಂಚಭೂತಗಳಿಂದಾಗಿ.

ಇತ್ತೀಚಿಗಿನ ದಿನಗಳಲ್ಲಿ ಪರಿಸರ ಮಾಲಿನ್ಯವೆಂಬ ಮಾತು ಸಾರ್ವತ್ರಿಕವಾದುದು. ಪರಿಸರವೆಂದರೇನೇ ಪಂಚಭೂತಗಳಿಂದ ಕೂಡಿದ್ದು. ಇದನ್ನು ಮಾಲಿನ್ಯ ಮಾಡಿದವರು ಮನುಷ್ಯರೇ. ತಿಳಿಯದೆ ಮಾಲಿನ್ಯಗೊಳಿಸಿದವರು ಕೆಲವರಾದರೆ, ತಿಳಿದು ಮಾಲಿನ್ಯಗೊಳಿಸಿದರು, ಗೊಳಿಸುತ್ತಿರುವವರು ಹಲವರು ಕೆಲವೊಮ್ಮೆ ಮನುಷ್ಯರ ಸ್ವಾರ್ಥವಿದಕ್ಕೆ ಕಾರಣ. ಈ ಸ್ವಾರ್ಥದಿಂದ ಕಂಗೆಡುತ್ತಿರುವುದು ಸಮಾಜ. ಈ ಎಚ್ಚರದಿಂದಾಗಿ 'ಪರಿಸರ ಜಾಗೃತಿ' ಒಂದು ಆಂದೋಲನದಂತೆ ವಿಶ್ವಾದ್ಯಂತ ನಡೆಯುತ್ತಿದೆ. ಆದರೂ ಪರಿಸರ ಮಾಲಿನ್ಯ ನಿಂತಿಲ್ಲ.

ಪರಿಸರ ಮಾಲಿನ್ಯವಾದರೆ ಎಂತಹ ದುರಂತವಾಗುತ್ತದೆ ಎಂಬುದಕ್ಕೆ ನಮ್ಮಲ್ಲಿ ನೂರು ಉದಾಹರಣೆಗಳಿವೆ. ಅಂತಹವುಗಳಲ್ಲಿ 2018ರಲ್ಲಿ ಇತ್ತ ಕನ್ನಡದ ಕಾಶ್ಮೀರ ಕೊಡಗಿನಲ್ಲಿ, ಅತ್ತ ದೇವರನಾಡು ಕೇರಳದಲ್ಲಿ ನಡೆದ ಭೂ ಕುಸಿತ, ಜಲ ಪ್ರಳಯವೇ ಸಾಕ್ಷ್ಯ. ಈ ಬಗೆಗೆ ಚಿಂತಿಸುತ್ತಿದ್ದಂತೆ ಪರಿಸರ ಜಾಗೃತಿಯ ಬಗೆಗೆ ಒಂದು ಯಕ್ಷಗಾನ ಪ್ರಸಂಗವೇಕೆ ಬರೆಯಬಾರದೆಂದು ತೋರಿತು. ಅದರ ಫಲಶ್ರುತಿಯೇ 'ಪಂಚಭೂತ ಪ್ರಪಂಚ'. ಇಲ್ಲಿ ಪಂಚಭೂತಗಳೊಂದಿಗೆ ಇತರ ಪಾತ್ರಗಳೂ ಇವೆ. ಇದು ಅನಿವಾರ್ಯವಾದ ಬೆಸುಗೆ. ಪ್ರಸಂಗ ಬರೆದ ಅನಂತರ ಪ್ರಸಂಗದ ಪದ್ಯಗಳಿಗೆ ಅರ್ಥ ಬರೆಯುವ ಮನಸ್ಸಾಯಿತು. ಈ ಅರ್ಥ

ಸರಳವಾದುದು, ಸಂಕ್ಷಿಪ್ತವಾದುದು, ಮಾರ್ಗದರ್ಶಿಯಾದುದು. ಹಿರಿಯರು ಅರ್ಥವನ್ನು ಹಿಗ್ಗಿಸಬಹುದು; ಕಿರಿಯರು ಇಲ್ಲಿದ್ದುದನ್ನು ಹೇಳಿದರೆ ಸಾಕಾದೀತು. ಕನ್ನಡ ನಾಡಿನ ಉದ್ದಗಲಕ್ಕೆ ಇದು ಪ್ರಸಾರಗೊಳ್ಳಬೇಕು; ಜನಮನ ಜಾಗೃತವಾಗಬೇಕೆಂಬುದು ರಚನೆಯ ಕಾಳಜಿ

ಈ ಕೃತಿಗೆ ಯಕ್ಷಗಾನದ ಅಗ್ರಮಾನ್ಯ ವಿಮರ್ಶಕರೂ, ಕವಿಗಳೂ ನನ್ನ ನಿಡುಗಾಲದ ಆತ್ಮೀಯರೂ ಆದ ಕೆ.ಎಂ. ನಂಬಿಯಾರ್ ಮುನ್ನುಡಿ ಬರೆದು ಕೊಟ್ಟಿದ್ದಾರೆ ಈ ಪ್ರೀತಿಗೆ –ಪ್ರೀತಿಯಲ್ಲದೆ ಮತ್ತೇನನ್ನು ಕೊಡಲಿ? ಇದು ನಿರಂತರ ಉಳಿಯಲಿ; ಇದೇ ಹಾರಯಿಕೆ.

ಕೃತಿಗೆ ಅರ್ಥಪೂರ್ಣವಾದ ಮುಖಪುಟವನ್ನು ರಚಿಸಿ ಶೋಭೆಯನ್ನು ತಂದ ಚಿತ್ರಕಲಾ ಶಿಕ್ಷಕ ಶ್ರೀ ಚಂದ್ರನಾಥ ಬಜಗೋಳಿ ಅವರಿಗೆ, ಪುಸ್ತಕವನ್ನು ಚೆನ್ನಾಗಿ ಮುದ್ರಿಸಿಕೊಟ್ಟ ಸಮೃದ್ಧಿ ಪ್ರಿಂಟರ್ಸ್ ಮುದ್ರಾಡಿ ಇದರ ಮಾಲಕರಾದ ಶ್ರೀ ಸುನಿಲ್ ಕುಮಾರ್ ಜೆ ಅವರಿಗೆ ಹಾರ್ದಿಕ ಕೃತಜ್ಞತೆಗಳು

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅದ್ಯಕ್ಷ ಸನ್ಮಾನ್ಯ ಎಂ.ಎ ಹೆಗಡೆಯವರು ಮತ್ತು ಅಕಾಡೆಮಿಯ ರಿಜಿಸ್ಟ್ರಾರರಾದ ಮಾನ್ಯ ಎಚ್.ಶಿವರುದ್ರಪ್ಪ ಅವರು ಅಕಾಡೆಮಿಯ ಪ್ರಕಟಣೆಯಾಗಿ ಸಮಾಜದ ಮುಂದಿಡುತ್ತಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

"ಅಕ್ಷರ'                                        ಅಂಬಾತನಯ ಮುದ್ರಾಡಿ

ಮುದ್ರಾಡಿ

# ಪಾತ್ರಗಳು

* ಪೃಥ್ವಿ
* ಜಲ
* ಅಗ್ನಿ
* ವಾಯು
* ಆಕಾಶ
* ಪರಮಾತ್ಮ
* ಧನಿಕ
* ರೈತ
* ಸಂತ್ರಸ್ತೆ
* ಫಕೀರ
* ವೃದ್ಧ
* ಜ್ಯೋತಿಷಿ
* ಭೂ ವಿಜ್ಞಾನಿ
* ಹವಾಮಾನ ತಜ್ಞ

**ನಾಂದಿ ಸ್ತುತಿ–ಭಾಮಿನಿ,ನಾಟಿರಾಗ**

ಆವುದೀಜಗದಾದಿ ಸೃಷ್ಟಿಯ
ಜೀವಕೋಟಿಯ ಜೀವನಕೆ ತಾ
ನೋವಿನಿಂದಿರಲಾಗಿ ಜೀವಿಗೆ ಬದುಕುತಾನಿಹುದೋ ॥
ಆ ವಿಶೇಷದ ಪಂಚಭೂತಕೆ
ಭಾವಶುದ್ಧಿಯಿನೆರಗಿ ಪರಿಸರ
ವಾವತೆರನಿಹುದೆನುತ ಬಣ್ಣಿಪೆ ಯಕ್ಷಗಾನದಲಿ ॥

**ಸೌರಾಷ್ಟ್ರ–ತ್ರಿವುಡೆ–(ಮಧ್ಯಮಾತಿ ರಾಗ)**

ಇತ್ತಲೊಂದಿನ ಪೃಥ್ವಿ ತಾ ಮೈ
**ಪೃಥ್ವಿ** ಮೆತ್ತು ಬಂದಳು ನಾರಿ ರೂಪದಿ
ಸುತ್ತ ಮುತ್ತವಲೋಕಿಸುತ ನೋ। ಯುತ್ತ ಮನದಿ ॥ ೧ ॥

ಹೌದು, ನಾನು ಪೃಥ್ವಿ ಇತ್ತೀಚೆಗಿನ ದಿನಗಳಲ್ಲಿ ಪರಿಸರ ಮಾಲಿನ್ಯದ ಕೂಗನ್ನು ಎಲ್ಲೆಡೆಯಿಂದ ಕೇಳುತ್ತಿದ್ದೇನೆ. ನನ್ನನ್ನು ಹೊರತಾಗಿ ಪರಿಸರ ಉಂಟೆ? ಪರಿಸರವೆಂದರೆ ಜನ ಸುತ್ತನೋಡುವ ನೆಲ– ನೆಲದ ಮೇಲೆ ಗಿಡಮರ ಸಸ್ಯರಾಶಿ, ಇವುಗಳ ಬದುಕಿಗೆ ಪೋಷಕವಾದ ಜಲ, ಉಸಿರಾಡುವುದಕ್ಕೆ ಗಾಳಿ, ಮೈ ಬೆಚ್ಚನೆಗೆ ಅಗ್ನಿ ಅಥವಾ ಶಾಖ. ಇದರೊಂದಿಗೆ ಕಣ್ಣಿಗೆ ಕಾಣದ, ಅನುಭವಕ್ಕೆ ಮಾತ್ರ ಗೊತ್ತಾಗುವ ವಾಯು ಮತ್ತು ಆಕಾಶ. ಪರಿಸರ ಮಾಲಿನ್ಯವೆಂದರೆ ಪಂಚಭೂತಗಳಾದ ನಮ್ಮ ಮೇಲಾಗುವ ಮಲಿನತೆ. ಈ ಸೃಷ್ಟಿಗೆ ಪ್ರಪಂಚವೆಂಬ ಹೆಸರು ಬಂದುದೇ ನಮ್ಮಿಂದ. ಯಾವ ಜೀವರಾಶಿಗಳ ಸುಖಕ್ಕಾಗಿ ನಮ್ಮ ಹುಟ್ಟಾಯಿತೋ, ಅದುವೇ ಮಲಿನತೆಯಿಂದ ಕೂಡಿದ್ದರೆ ಜೀವರಾಶಿಯಾದರೂ ಬದುಕುವುದು ಹೇಗೆ? ಜನರ ಕೂಗಿನ ಯಥಾರ್ಥತೆಯನ್ನು

ತಿಳಿಯಲು, ನನ್ನನ್ನು ನಾನೇ ನೋಡಿಕೊಳ್ಳಲು ಮೆಯ್ಯಾಗಿಸಿಕೊಂಡಿದ್ದೇನೆ. ಸುತ್ತ ನೋಡುತ್ತಿದ್ದೇನೆ......................

ಏನಿದೆತ್ತಣ ಹೊಲಸು ವಾಸನೆ;
ಮಾನವರು ಮತಿಹೀನರಾದರೆ ?
ನಾನು ಮೂಗನು ಮುಚ್ಚಿಕೊಳ್ಳುವುದಾಯ್ತೆ ವಿಧಿಯೆ ॥ ೨ ॥

ಏನಿದು ಹೊಲಸುವಾಸನೆಯೆಂದು ಮೂಗುಮುಚ್ಚಿಕೊಂಡು ಸುತ್ತ ನೋಡುತ್ತಿದ್ದೇನೆ–ಅಲ್ಲಲ್ಲಿ ಅಲ್ಲಲ್ಲಿ ಹೊಲಸು ಕಸಗಳ ರಾಶಿ. ಕಸಗಳೊಂದಿಗೆ ಸತ್ತ ಇಲಿ ಹೆಗ್ಗಣಗಳು. ಅದನ್ನು ತಿನ್ನಲು ಕಚ್ಚಾಡುವ ಕಾಗೆಗಳು, ನಾಯಿಗಳು. ಗುಂಯ್ ಎಂದು ಹಾರಾಡುವ ನೊಣಗಳು, ಸೊಳ್ಳೆಗಳು. ಪರಿಸರವೆಲ್ಲ ದುರ್ವಾಸನೆಯ ಬೀಡಾಗಿದೆ. ಇದರ ಜೊತೆಯಲ್ಲಿ ಹಾನಿಕಾರಕವಾದ ಪ್ಲಾಸ್ಟಿಕ್ ಚೀಲಗಳು, ಬಾಟಲಿಗಳು. ಮತಿವಂತನಾದ ಮಾನವ ಆಧುನಿಕ ಜೀವನದ ಭರಾಟೆಯಲ್ಲಿ ಮತಿಗೇಡಿಯಾಗಿ ಹೋದನಲ್ಲ !

ಎಲ್ಲಿ ಹೋಯಿತು ಬೆಟ್ಟ ಗುಡ್ಡವು,
ಎಲ್ಲಿ ಕಾನನ ವೃಕ್ಷರಾಶಿಯು?
ಖುಲ್ಲಮಾನವರಾಕ್ರಮಣ, ಹಾ। ಬೆತ್ತಲಾದೆ ॥ ೩ ॥

ಏನಾಶ್ಚರ್ಯವಿದು! ಎಲ್ಲಿ ಹೋದುವು ಅಲ್ಲಲ್ಲಿ ಕಾಣುತ್ತಿದ್ದ ಬೆಟ್ಟಗಳು; ಗುಡ್ಡಗಳು? ಬಾನೆತ್ತರಕ್ಕೆ ಬೆಳೆದು ನಿಂತಿದ್ದ ಹೆಮ್ಮರಗಳು? ಬಗೆಬಗೆಯ ಸಸ್ಯಗಳು? ನೀರಿನಿಂದ ತುಂಬಿದ್ದ ಕೆರೆ–ಹಳ್ಳಗಳಿಗೆ ಮಣ್ಣುತುಂಬಿ ಮನೆಕಟ್ಟಲಾಗಿದೆ. ಸ್ವಾರ್ಥಕ್ಕಾಗಿ ಕಾಡನ್ನು ಕಡಿದು ಮನುಷ್ಯರು ಹಣಸಂಪಾದಿಸುತ್ತಿದ್ದಾರೆ. ಮರಗಳಿಲ್ಲದೆ ಮಣ್ಣಿನ ಸವಕಳಿ ಆಯಿತು. ನೆಲದ ಮೇಲಣ ಸಾರವತ್ತಾದ ಒಂದಂಗುಲದ ಮಣ್ಣು ನಿರ್ಮಾಣವಾಗುವುದಕ್ಕೆ ಇನ್ನೂರು

ವರ್ಷಗಳು ಬೇಕು. ಮನುಷ್ಯರಿದನ್ನು ತಿಳಿಯದೆ ಹೋದರೆ? ಅಂತೂ ನನ್ನನ್ನು ಬೆತ್ತಲೆಗೊಳಿಸಿದರು! ಯಾರನ್ನು ಕೇಳುವುದು; ಯಾರಲ್ಲಿ ಹೇಳುವುದು?

**ಭೈರವಿ–ಝಂಪೆ**

ಜಲ

ನೆಲದಾಯಿ ತಾನಿಂತು ಮರುಗುತಿಹ ವೇಳೆಯಲಿ
ನೆಲೆಯರಿತು ಬಂದಳದೊ ವಾರಿ ತಾನೊಡನೆ ॥–॥
ನೆಲ ಬೇರೆ, ಜಲ ಬೇರೆಯಲ್ಲ ನಾವ್ ಬದುಕಿನಲಿ
ತಿಳಿಯಲೀರ್ವರ ನೋವು ಪೇಳಲಾರೊಡನೆ ॥ ೧ ॥

ಹೌದು; ನಾನು ನೀರು. ಹರಿಯುವುದು ನನ್ನ ಸ್ವಭಾವ. ಹರಿಯುವುದಾದರೂ ಎಲ್ಲಿ? ಈ ನೆಲದ ಮೇಲೆ. ನೆಲವನ್ನುಳಿದು ಜಲವಿಲ್ಲ. ನಾವಿಬ್ಬರು ಒಡಹುಟ್ಟುಗಳು. ಪಂಚಭೂತಗಳಲ್ಲಿ ನಾವಿಬ್ಬರು ಸ್ತ್ರೀಯರು. ಉಳಿದವರು ಪುರುಷರು. ಈ ಸೃಷ್ಟಿಯೇ ಪ್ರಕೃತಿ ಪುರುಷರ ಸಹಯೋಗದ ಸತ್ಫಲ. ಪೃಥ್ವಿ ನೋಯುತ್ತಿದ್ದಾಳೆ–ಏಕಾಕಿನಿಯಾಗಿ ! ನಾನೀಗ ಅವಳನ್ನು ಕಾಣಬೇಕು. ಅದಕ್ಕಾಗಿ ಹರಿಯುವ ನಾನು ಹೆಣ್ಣಾಗಿ ಕಾಣಿಸಿಕೊಂಡಿದ್ದೇನೆ. ಸುತ್ತ ನೋಡುತ್ತಿದ್ದೇನೆ.

ಕೆರೆಹಳ್ಳ ತೊರೆಗಳಲಿ ನಾ ತುಂಬಿ ತಣಿದಿದ್ದೆ.
ತಿರೆಗೆ ನೀರುಣಿಸಿದ್ದೆ, ಹಸಿರು ಹೊದಿಸಿದ್ದೆ ॥
ಬರಿ ಸ್ವಾರ್ಥಿಜನ ಮಣ್ಣು ತುಂಬಿದರು ಕೆರೆಗಳಿಗೆ
ಬರಿದಾದುದೆನ್ನೊಡಲು, ಪೇಳಲಾರೊಡನೆ ॥

ನೆಲದಾಯಿಯ ದುಃಖಕ್ಕೆ ಕಾರಣವೇನೆಂದು ಸುತ್ತೆಲ್ಲ ನೋಡುತ್ತಿದ್ದೇನೆ– ನಾನು ಕೆರೆಹಳ್ಳಗಳ ಮೂಲಕ ನೆಲವನ್ನು ತಣಿಸಿದ್ದೆ ಮೈಗೆ ಹಸಿರನ್ನು ಹೊದಿಸಿದ್ದೆ. ಆದರೀಗ ಕೆರೆಯಿಲ್ಲ, ಹಳ್ಳವಿಲ್ಲ. ಎಲ್ಲದರ ಮೇಲೂ ಮನುಷ್ಯರ ಆಕ್ರಮಣ! ಎಲ್ಲಿದೆ ಪ್ರಾಣಿ ಪಕ್ಷಿಗಳಿಗೆ ನೀರು? ನೆಲದ ಮೇಲಿನ ಯಾವ ಜಲರಾಶಿಯೂ ಯಾರ ಅಧೀನವಲ್ಲ. ಜಲದ

ಮೇಲೆ ಕಲ್ಲು ಮಣ್ಣು ತುಂಬಿ ಕಟ್ಟಿದ ಮನೆಗಳೆಷ್ಟು ಕಾಲ ಉಳಿಯಬಲ್ಲವು ? ನನ್ನ ಅಸ್ತಿತ್ವವನ್ನೇ ಇಲ್ಲವಾಗಿಸಿದ ಈ ಮನುಷ್ಯರು ಮುಂದೆ ಮಣ್ಣು ಮುಕ್ಕಬೇಕಾದೀತು ! ನನ್ನನ್ನು ತಿಳಿಯದಾದರಲ್ಲ ಇವರು!

॥ **ಕಾಂಭೋದಿ–ಝಂಪೆ** ॥

ಸರ್ವಜನಜೀವನಕೆ ನಾನು ಬೇಕಾಗಿದ್ದೆ
ಸರ್ವಜನರೆನಗಿತ್ತ ಹೆಸರು ಜೀವನವು ॥
ಸರ್ವಮಾಲಿನ್ಯತೆಯ ತಂದತ್ತರೀಗೆನಗೆ
ನಿರ್ವಿಕಾರದ ಹೃದಯವಾಯ್ತು ವಿಷದೊಡಲು ॥ ೧ ॥

ಸಚೇತನವಾದ ಜೀವರಾಶಿಗೆಲ್ಲ ನಾನು ಬೇಕಾಗಿದ್ದೆ. ನಾನಿಲ್ಲದೆ ಹಸಿರಿಲ್ಲ; ಹಸಿರಿಲ್ಲದೆ ಉಸಿರಿಲ್ಲ . ಎಲ್ಲರ ಜೀವಕ್ಕೆ ನಾನು ಅನಿವಾರ್ಯವಾಗಿದ್ದೆ. ಹೀಗಾಗಿ, ನನ್ನನ್ನು ಜೀವನವೆಂದೇ ಕರೆದರು. ನೆಲದ ಮೇಲೆ ಹೊಳೆಯಾಗಿ ಹರಿದಿದ್ದೆ. ಎಷ್ಟೋ ಜನರಿಗೆ ಹೊಳೆಯ ನೀರೇ ಮೂಲವಾಗಿತ್ತು.ಈಗ ಹರಿವ ನೀರಿಗೆ ಬೃಹತ್ ಕೈಗಾರಿಕೆಗಳ ಯಂತ್ರ  ಹೊರಚೆಲ್ಲುವ ವಿಷದ ನೀರು ಸೇರಿಕೊಂಡಿದೆ.ಇದ್ದ ಕೊಳೆ ಕೊಚ್ಚೆಗಳನ್ನು, ಸತ್ತ ಪ್ರಾಣಿಗಳನ್ನು ನೀರಿಗೆಸೆಯುತ್ತಿದ್ದಾರೆ. ಒಂದು ಕಾಲದಲ್ಲಿ 'ತುಂಗಾಸ್ನಾನ, ಗಂಗಾಪಾನ' ಎಂಬ ಗೌರವ ತುಂಗಾನದಿಗಿತ್ತು. ಈಗ ಕಾವೇರಿ ಕಲುಷಿತವಾಗಿದೆ. 'ಗಂಗಾಸ್ವಚ್ಛತಾಅಭಿಯಾನ' ಅನಿವಾರ್ಯವೆನಿಸಿದೆ. ನೆಲಜಲಗಳ ಗೋಳು ಒಂದೇಬಗೆಯಾಗಿದೆ. ನನಗೂ ನೆಲವೇ ಆಶ್ರಯವಾಗಿ ಅಲ್ಲಿಗೇ ಹೋಗುತ್ತೇನೆ.

***

**ಭೈರವಿ ಝಂಪೆ–ಕಲ್ಯಾಣಿರಾಗ**

**ಅಗ್ನಿ** ಎಂದ ಮಾತನು ಕೇಳುತ। ಅಗ್ನಿತಾ
ಬಂದ ವ್ಯಥೆಯನು ತಾಳುತ ॥
ಹಿಂದಿನಂತಲ್ಲವಿಂದು। ಮಾನವರು
ತಂದರೇ ಗುಣಕೆ ಕುಂದು ? ॥ ೧ ॥

ಹೌದು, ನೆಲಜಲಗಳ ಅಂತರಂಗದ ಅಳಲನ್ನು ಆಲಿಸಿದೆ. ಪಂಚಭೂತಗಳಲ್ಲಿ ಮಧ್ಯಮನು ನಾನು. ನಾನಿಲ್ಲವಾದರೆ ಜೀವರಾಶಿಗೆ ಶಾಖವಿಲ್ಲ; ಲೋಕಕ್ಕೆ ಬೆಳಕಿಲ್ಲ. ನಾನು ಪೃಥ್ವಿ ದೇವತೆ. ಮೇಲ್ ಮುಖವಾಗಿ ಉರಿಯುವ ನಾನು, ಜೀವರಾಶಿಗಳ ಆಹಾರ ಪಚನಕ್ಕೂ ಮೆಯ್ಯ ಬಿಸುಪಿಗೂ ಕಾರಣನು. ವೈದಿಕರು ನನ್ನನ್ನು 'ಹವ್ಯವಾಹ' ಎಂದು ಕರೆದರು. ಅಗ್ನಿಯ ಮೂಲಕ ಅರ್ಪಿಸುವ ಹವಿಸ್ಸನ್ನು ದೇವತೆಗಳಿಗೆ ಮುಟ್ಟಿಸುವವನೇ ನಾನು. 'ಅಗ್ರಂ ನಯತಿ ಇತಿ ಅಗ್ನಿ' ನಾನು ಮೇಲಕ್ಕೆ ಕೊಂಡೊಯ್ಯುವವನು. ನನಗೆ ಕರಾಲೀ, ಧೂಮಿನೀ, ಶ್ವೇತಾ, ಲೋಹಿತಾ, ನೀಲಲೋಹಿತಾ, ಸುವರ್ಣಾ, ಪದ್ಮರಾಗಗಳೆಂಬ ಏಳು ನಾಲಗೆಗಳು. ಉರಿಯುವುದು ನನ್ನ ಸ್ವಭಾವ. ಈ ಉರಿಯುವಿಕೆಯಲ್ಲಿ ಪ್ರಾಜ್ಞರಾದವರು ಏಳು ಬಣ್ಣಗಳನ್ನು ಗುರುತಿಸಿದರು. ಇಂತಹ ನಾನೇ ಇಲ್ಲವಾದರೆ......................

ನಾನಿಲ್ಲದೆಡೆಯೆಯಿಲ್ಲ । ಜೀವರಿಗೆ
ನಾನಿರದೆ ಸ್ವಾಸ್ಥ್ಯವಿಲ್ಲ॥
ಏನಾದುದೀಗಯೆನಗೆ ನಿಜತಾಪ
ಮಾನದಲಿ ನನಗು ಬೇಗೆ ॥ ೨ ॥

ನಾನಿಲ್ಲದ ಎಡೆಯಿಲ್ಲ. ಪೃಥ್ವಿಯಲ್ಲಿ ಜ್ವಾಲಾಮುಖಿ! ಜಲದಲ್ಲಿ ಬಡಬಾಗ್ನಿ. ಅರಣಿ ಮಥನದಲ್ಲಿ ಯಜ್ಞಾಗ್ನಿ. ಸಾಮಾನ್ಯರು ನನ್ನನ್ನು ಬೆಂಕಿಯೆಂದು ಕರೆದರು. ಬೆಂಕಿಯಿಲ್ಲದೆ ಅಡುಗೆಯೆಲ್ಲಿ? ನೀರು ಕಾಯಿಸುವುದೆಲ್ಲಿ ? ಶಾಖವಿಲ್ಲದೆ ಯಂತ್ರಗಳು

ಚಲಿಸಲಾರವು. ಕಟ್ಟಿಗೆಯ ಮೂಲಕ, ಕಲ್ಲಿದ್ದಲಿನ, ಮೂಲಕ ವಿದ್ಯುತ್ತಿನ ಮೂಲಕ ಶಾಖವಾಗಿರುವವನು ನಾನೇ. ನನಗೆ ಅನೇಕ ಹೆಸರುಗಳಿವೆ. ಅವುಗಳಲ್ಲಿ 'ಕಿಚ್ಚು' ಎನ್ನುವುದೂ ಒಂದು. ಈ ಹೆಸರು ನನಗೆ ಕೊಟ್ಟವರೇ ಮಾನವರು. ಜಠರಾಗ್ನಿಯಾಗಿ ನಾನು ಅವರ ಒಳಗಿದ್ದೆ. ಅವರಿಗೆ ತಿಂದು ತಿಂದು ಅಹಂಕಾರ ಹೆಚ್ಚಿತು. ಅದು ಹೊಟ್ಟೆಯ ಕಿಚ್ಚಾಯಿತು. ಪ್ರಾಯ: ಈ ಪ್ರಪಂಚದಲ್ಲಿ ಹೊಟ್ಟೆಕಿಚ್ಚಿನ ಪ್ರಾಣಿ ಮನುಷ್ಯನೊಬ್ಬನೇ. ಮನುಷ್ಯನ ಈ ಕಿಚ್ಚು ಏನೇನೆಲ್ಲ ಅನರ್ಥಗಳನ್ನು ಮಾಡುತ್ತಿದೆ! ನಾನು ಕೇವಲ ಶಾಖವಲ್ಲ; ಉರಿಯಲ್ಲ.

**ಭಾಮಿನಿ–ಹಿಂದೋಳ**

ಬೆಳಕು ಶಾಖಗಳಿರದೆ ಜೀವರು
ಉಳಿವರೇ, ನಾನಿದಕೆ ಮೂಲನು;
ತಿಳಿಯದಾದರು ಜನರು; ಕೆಡಿಸಿದರೆನ್ನ ತೇಜವನು ॥
ಅಳುತಿಹರು ಈ ಪೃಥ್ವಿ, ವರುಣರು,
ಕೆಳೆಯು ನಮಗಲ ವಾಯು; ಕಾಣಿಸಿ
ಕೊಳದೆ ತಾನೆಂತಿಹನೊ, ಶಬ್ದ ಸ್ಪರ್ಶಗಮ್ಯನಲ ॥

ಜೀವರಾಶಿಗಳೆಂದೂ ಬೆಳಕಿರದೆ, ಶಾಖವಿರದೆ ಬಾಳಲಾರವು. ನಾನು ಬೆಳಕಿನ ಪ್ರತೀಕವೂ ಹೌದು; ಲೋಕಕ್ಕೆ ಬೆಳಕು ನೀಡುವವನೇ ಸೂರ್ಯ. ಅವನು 'ದ್ಯು' ಸ್ಥಾನದ ದೇವತೆ. ಅಂತರಿಕ್ಷದಲ್ಲಿ 'ವೈದುತಾಗ್ನಿ' ಅಂದರೆ ಮಿಂಚು. ಹೀಗಾಗಿ ನಾನು ಪೃಥ್ವಿ 'ದ್ಯು' ಸ್ಥಾನ, ಅಂತರಿಕ್ಷಗಳಲ್ಲಿ ಕಾಣಿಸಿಕೊಳ್ಳುವವನು. ನನಗೆ ಇನ್ನೊಂದು ಹೆಸರು ತೇಜ. ಅತ್ತ ನೆಲ, ಜಲಗಳು ಖಿನ್ನರಾಗಿದ್ದರೆ, ಇತ್ತ ನನ್ನ ತೇಜವೂ ಮಾಸಿದೆ. ಯಾರು ಸದಾ ಬಿಸಿಯಾಗಿರುತ್ತಾನೋ ಅವನಿಗೂ ಬಿಸಿ ಮುಟ್ಟಿಸುತ್ತಿದ್ದಾರೆ ಈ ಮಾನವರು. ತಾಪಮಾನದ ಏರಿಳಿಕೆಗೆ ಇವರೇ ಕಾರಣರು. ನನ್ನವರ ನೋವೇ ನನ್ನದೂ ಆಗಿದೆ. ನಮ್ಮ ಜೊತೆಗಾರ

ಇನ್ನೊಬ್ಬನಿದ್ದಾನೆ. ಅವನೇ ವಾಯು. ಅವನಿಲ್ಲದ ಎಡೆಯಿಲ್ಲ. ಆದರೆ ಅವನಾರ ಕಣ್ಣಿಗೂ ಕಾಣಿಸುವುದಿಲ್ಲ. ಕೇವಲ ಶಬ್ದ ಸ್ಪರ್ಶಗಳಿಂದಲೇ ಅವನನ್ನು ತಿಳಿಯಬೇಕು. ಪಂಚಭೂತಗಳಲ್ಲಿ ಮೂವರು ದೃಗ್ಗೋಚರರು; ಉಳಿದಿಬ್ಬರು ಅಗೋಚರರು ಅವನೆಂತು ನಮ್ಮನ್ನು ಕಾಣದಿರಲು ಸಾಧ್ಯ? ನೋಡೋಣ..................

***

**ಅಠಾಣ–ಝಂಪೆ**

ವಾಯು ಎಲ್ಲದರ ಎಲ್ಲವರ ಒಳಗಿರುವೆ, ಹೊರಗಿರುವೆ
ನಿಲ್ಲದೊಂದೆಡೆಯಲ್ಲಿ ಸಂಚರಿಸುತಿರುವೆ ॥
ಎಲ್ಲಿ ನಾನಿಲ್ಲದಿರೆ ಜೀವತತಿ ಬದುಕಲಿದೆ?
ಎಲ್ಲರಿಗು ನಾ ಪ್ರಾಣರೂಪನಾಗಿರುವೆ ॥ ೧ ॥

ಹೌದು; ಎಲ್ಲ ಜೀವರ ಒಳಹೊರಗೆ ಚಲಿಸುತ್ತಿದ್ದೇನೆ. ನಿಂತಲ್ಲಿ ನಿಲ್ಲದ 'ಸದಾಚರ'ನಾದ ನಾನು, ಸರ್ವವ್ಯಾಪಿಯೂ ಆಗಿದ್ದೇನೆ. ನನಗೆ ಪ್ರಾಣ ವಾಯುವೆಂಬ ಹೆಸರಿದೆ. ಎಲ್ಲರ ಅಳಿವು ಉಳಿವುಗಳು ನನ್ನ ಕೈಯಲ್ಲಿದೆ. ಹೀಗಾಗಿ ನಾನು ಮುಖ್ಯಪ್ರಾಣ. ಪಂಚಭೂತಗಳಲ್ಲಿ ಅವತರಣ ಮುಖವಾಗಿ ನಾನು ಎರಡನೆಯವನು . ನನ್ನಿಂದ ಮೊದಲಿಗನು ಆಕಾಶ. ನನ್ನ ಅನಂತರದವರು ಅಗ್ನಿ, ವರುಣ, ಪೃಥ್ವಿಯರು. ಆರೋಹಣ ಮುಖವಾಗಿ ನಾನು ನಾಕನೆಯವನು ತಾನೆ? ನಾನಿಲ್ಲದ ಎಡೆಯಿಲ್ಲ. ಕಾಡಿನಲ್ಲಿ ಬಿದಿರಿನ ಮೆಳೆಗಳು ತಿಕ್ಕಾಡಿದಾಗ ಬೆಂಕಿ ಕಾಣಿಸಿಕೊಳ್ಳುತ್ತದೆ. ಈ ಬೆಂಕಿ ಹೊರಗಿದ್ದುದಲ್ಲ ಒಳಗೆಯೇ ಇತ್ತು. ಅದನ್ನು ಹೊರಹಾಕಿದವನು ನಾನು. ನೀರಿನಲ್ಲಿ ಬೆಂಕಿಯಿರುವುದನ್ನು ತೋರಿಕೊಟ್ಟವನೂ ನಾನೇ. ಕೊಳಲಿನ ರಂಧ್ರಗಳಿಂದ ನಾದವನ್ನು ಹೊರಡಿಸುವವನೂ ನಾನೇ. ವೀಣೆಯ ತಂತಿಯಿಂದ ನಾದ ಹೊಮ್ಮಿಸುವವನೂ ನಾನೇ. ನಾದವೆಂದರೆ ಶಬ್ದತಾನೆ! ಹೀಗಾಗಿ ನಾನು ಶಬ್ದಗಮ್ಯ; ನಾನು ಚಲಿಸುತ್ತಾ ಮನುಷ್ಯರನ್ನು ಸ್ಪರ್ಶಿಸುತೇನೆ. ಆ ಸ್ಪರ್ಶ ತಂಪಾಗಿರಬಹುದು; ಬಿಸಿಯಾಗಿರಲೂಬಹುದು. ಹೀಗಾಗಿ ನಾನು ಸ್ಪರ್ಶಗಮ್ಯ!

ನಾನು ಮನುಷ್ಯರಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನನಾಗಿ ಕಾರ್ಯವೆಸಗುತ್ತೇನೆ. ಜೀವಿಗಳು ಬದುಕುವುದೇ ಉಸಿರಾಟದ ಮೂಲಕ. ಉಸಿರಾಟ ನಿಂತಿತೋ, ಪ್ರಾಣ ಹೋಯಿತು ಎನ್ನುತ್ತಾರೆ. ಈಗ ನೋಡಿದರೆ.......

**ಸಾಂಗತ್ಯ-ರೂಪಕ**

ಎತ್ತ ನೋಡಿದರತ್ತ ಹೊಗೆಯುಗುಳುವ ಯಂತ್ರ
ಸುತ್ತೆಲ್ಲವಾಹನ ಹೊಗೆ, ದೂಳು ॥
ಅತ್ತ ನೋಡಲು ಅಣು ವಿಕಿರಣಗಳ ತಾಪ
ಮತ್ತೆಲ್ಲಿ ಮಧುವಾತ ಬೀಸು ॥

ಈಗ ಎಲ್ಲಿ ನೋಡಿದರಲ್ಲಿ ಬೃಹತ್ ಕೈಗಾರಿಕೆಗಳ ಪೈಪೋಟಿ ! ಅವುಗಳಿಂದ ಹೊರಹೊಮ್ಮುವ ದಟ್ಟವಾದ ಹೊಗೆ, ಇತ್ತ ವಾಹನಗಳ ಓಡಾಟಗಳಿಂದ ಹೊಗೆಯೊಂದಿಗೆ ದೂಳು. ಹೀಗಾಗಿ ವಾಯುಮಾಲಿನ್ಯವಾಗಿದೆ. ಅಂದರೆ ನನಗೆ ಮಲಿನತೆ ತಟ್ಟಿದೆ. ಅತ್ತನೋಡಿದರೆ ಅಣುವಿಕಿರಣಗಳು ಚೆಲ್ಲುವ ವಿಷಗಾಳಿ; ಹೆಚ್ಚಿದ ತಾಪಮಾನ; ಇದರಿಂದಾಗಿ, ಸೂರ್ಯಕಿರಣಗಳು ನೇರವಾಗಿ ನೆಲದ ಮೇಲೆ ಬೀಳದಂತೆ ಪ್ರಕೃತಿಯೇ "ಓಜೋನ್" ಪರದೆಯನ್ನು ನಿರ್ಮಿಸಿತ್ತೋ, ಅದು ಕೂಡ ಬಿರುಕು ಬಿಟ್ಟು ದಿನದಿಂದ ದಿನಕ್ಕೆ ಸುಡುಬೇಗೆಯ ಅನುಭವ ಮಾನವನಿಗಾಗುತ್ತಲಿದೆ. ಈ ಬಿಸಿ ನನ್ನನ್ನೂ ಬಿಟ್ಟಿಲ್ಲ. 'ಬಿಸಿಗಾಳಿ ಬೀಸಿತು' ಎನ್ನುತ್ತಾರೆ ಜನ! ಒಂದು ಕಾಲಕ್ಕೆ ಜನ 'ಮಧುವಾತಾ ಋತಾಯತೇ' ಎನ್ನುತ್ತಿದ್ದರು. ಈಗೆಲ್ಲಿ ಅಂತಹ ಪರಿಶುದ್ಧ ತಂಗಾಳಿ ? ಹವಾಮಾನದ ವ್ಯತ್ಯಾಸಗಳಿಂದಾಗಿಯೇ ಅತಿವೃಷ್ಟಿ, ಅನಾವೃಷ್ಟಿಗಳು ಆಗುತ್ತಿವೆ. ಬಿರುಗಾಳಿ ಬೀಸುತ್ತಿದೆ. ನನ್ನ ಪಾರಮ್ಯವನ್ನೂ ಬಲ್ಲವರು 'ಮಾತೇವ ಪುತ್ರಾನ್ ರಕ್ಷಸ್ವ' ತಾಯಿ ಮಕ್ಕಳನ್ನು ರಕ್ಷಿಸುವಂತೆ ನಮ್ಮನ್ನು ರಕ್ಷಿಸುಯೆನ್ನುತ್ತಿದ್ದರು. ಈಗ ಬಾಯಿ ಮೂಗಿಗೆ ಬಟ್ಟೆ ಕಟ್ಟಿಕೊಂಡು ಓಡಾಡುತ್ತಿದ್ದಾರೆ. ನಾನಾದರೂ ಹೇಳುವುದು ಯಾರಲ್ಲಿ?

***

**ಸುರುಟ–ಏಕತಾಳ**

ಇರುತಿರಲವಕಾಶ। ನನ್ನನು। ಕರೆದರು ಆಕಾಶ
**ಆಕಾಶ** ಇರುತಿಹೆನೆಲ್ಲರ। ತೆರನಾನೆನಿಸದೆ
ಪರಿಕಿಸಲುಪಮೆಯು। ಪೆರತೊಂದಿಲ್ಲವು ॥ ೧ ॥

ಹೌದು, ನಾನು ಆಕಾಶ ಮೇಲೆ ಮೇಲೆ ಹೋದಂತೆಲ್ಲ ಅವಕಾಶವಿರುವುದರಿಂದಲೇ ನಾನು ಆಕಾಶನೆನಿಸಿದೆ. ನಾನು ನನ್ನ ಒಡಹುಟ್ಟುಗಳಂತಲ್ಲ. ನನಗೆ ನಿಶ್ಚಿತ ಬಣ್ಣವಿಲ್ಲ,ರೂಪವಿಲ್ಲ.ಆದರೆ ಕೆಳಗಿದ್ದವರು ನನ್ನ ಬಣ್ಣ ನೀಲಿಯೆಂದರು.ಬಣ್ಣದ ಬದುಕಿನವರು ಎಲ್ಲರಿಗೂ ಬಣ್ಣ ಬಳಿಯುತ್ತಾರೆ. ಅವರಿಗೆ ಗುರುತಿಸಲು ಬಣ್ಣಬೇಕು. ಯಾವುದರೊಂದಿಗೂ ನನ್ನನ್ನು ಹೋಲಿಸಲಾಗದು. ಹೀಗಾಗಿಯೇ 'ಗಗನಂ ಗಗನಾಕಾರಂ' ಎಂದರು. ಅಂತೆಯೇ ಸಾಗರವನ್ನು ತಿಳಿಯಲಾರದೆ 'ಸಾಗರೋ ಸಾಗರೋಪಮ' ಎಂದರು. ನನ್ನನ್ನು ಕಾಣ ಬಯಸಿದವರು ಹಲವರು; ತಿಳಿಯ ಬಯಸಿದರು ಎಲ್ಲೋ ಕೆಲವರು. ತಿಳಿಯ ಹೋದಂತೆಲ್ಲ........

ತಿಳಿದನಿತೂ ಗೂಢ । ನಮ್ಮನು । ತಿಳಿಯದಾದ ಮೂಢ
**ಆಕಾಶ** ನೆಲಜಲ ತೇಜಾ। ನಿಲ ಬಾನ್‌ಗುಣಗಳ
ನೆಲೆಯರಿಯದೆ ದಿನ। ಹೊಲೆಗೆಡಿಸುತಲಿಹ ॥ ೨ ॥

ನಾವು ತಿಳಿಯ ಹೋದಷ್ಟು ಗಾಢವಾಗಿ ಆವರಿಸಿಕೊಳ್ಳುತ್ತೇನೆ; ಗೂಢವಾಗಿ ಉಳಿದುಕೊಳ್ಳುತ್ತೇವೆ. ಮೂಢ ಮಾನವ ನಮ್ಮನ್ನೆಂತು ಕಾಣಬಲ್ಲ; ತಿಳಿಯಬಲ್ಲ? ಪಂಚಭೂತಗಳಾದ ನಮ್ಮ ಗುಣವನ್ನು ನಮ್ಮ ಅನಿವಾರ್ಯತೆಯನ್ನು ತಿಳಿಯದ ತಿಳಿಗೇಡಿಯಾದ ಮನುಷ್ಯ–ನಮ್ಮನ್ನು ಹೊಲೆಗೆಡಿಸುತ್ತಿದ್ದಾನೆ. 'ವಿನಾಶ ಕಾಲೇ ವಿಪರೀತ ಬುದ್ಧಿ' ಎಂಬಂತೆ ಅವನ ಕೊನೆಗಾಲದ ಸ್ಥಿತಿಯಿದಾಗಿದೆ. ಅವರಂತು ಹಾಳಾದರು,

ಅದರೊಂದಿಗೆ ನಮ್ಮನ್ನು ಹಾಳುಮಾಡಿದರು ನಮಗೆ ವಿಶ್ವಾಸವಿತ್ತು ಜೀವಕೋಟಿಗಳಲ್ಲಿ ಬುದ್ಧಿಯುಳ್ಳಜೀವಿ ಮನುಷ್ಯ ಮಾತ್ರ. ಅವನಿಂದಾಗಿ ಸರ್ವಹಿತವಾದೀತೆಂದು. ನಮ್ಮನ್ನು ಉಪಯೋಗಕ್ಕೆಂದು, ಉಪಾಸನೆಗೆಂದು ತಿಳಿಯುತ್ತಾನೆಂದು. ಈಗ ನೋಡಿದರೆ ನಾವು ಸ್ವಾರ್ಥಿಮಾನವನ ಉಪಭೋಗದ ವಸ್ತುವಾಗಿ ಹೋದೆವು! ಅತಿಬುದ್ಧಿವಂತಿಕೆಯಿಂದಾದ ಅನಾಚಾರವಿದು ! ಆದರೆ ನಮ್ಮ ಹೆಸರಿಗೆ ಪರಿಸರ ಮಾಲಿನ್ಯದ ಆರೋಪ. ಹೀಗಾಗಿ ನನ್ನ ಒಡಹುಟ್ಟುಗಳು....

**ಸಾಂಗತ್ಯ–ರೂಪಕ, ಮೋಹನ**

ಅಲ್ಲಿನಾಲ್ವರು ಖಿನ್ನರಾಗಿಹರೊಂದಾಗಿ
ಇಲ್ಲಿರಲೆಂತು ನಾನೋರ್ವ॥
ಇಲ್ಲ ನಮ್ಮಲಿ ಭೇದ ಭಾವವು ಹೀಗಾಗಿ
ಮೆಲ್ಲನೈದುವೆನೆಂದು ಹೊರಟ ॥ ೧ ॥

ನನ್ನೊಂದಿಗರು ಖಿನ್ನರಾಗಿ ಅಲ್ಲಿರುವಾಗ ನಾನೆಂತು ಸುಮ್ಮಗಿರಲು ಸಾಧ್ಯ? ಹೊರನೋಟಕ್ಕೆ ನಾವು ಬೇರೆಬೇರೆ. ಸೂಕ್ಷ್ಮವಾಗಿ ನೋಡಿದರೆ, ನಾವು ಅಭಿನ್ನರು. ಒಟ್ಟಾಗಿಯೇ ಕಾರ್ಯವೆಸಗುತ್ತಿರುವವರು. ನಮ್ಮ ಸಾಂಗತ್ಯ–ಸರ್ವದಾ ರೂಪಕ! ನಾನು ಅವರನ್ನು ಸೇರಿಕೊಳ್ಳಬೇಕು.

***

**ಕೇದಾರಗೌಳ–ಝಂಪೆ**

**ನಾಕು ಜನ**

ಬಾನುನಡೆತರೆ ಕಾಣುತ । ನಾಕುಜನ
ಸಾನುರಾಗದೊಳೆರಗುತ ॥
ನೀನೆಮಗೆ ಹಿರಿಯನಹುದು। ಮನದ ದು–
ಮ್ಮಾನವನು ಪರಿಹರಿಪುದು ॥ ೧ ॥

ಅಯ್ಯಾ ಮಹಾನುಭಾವ, ನಿನಗಿದೋ ವಂದನೆಗಳು. ನೀನು ನಮಗೆಲ್ಲ ಹಿರಿಯವನು. ನಾವು ನಿನ್ನ ಒಡಹುಟ್ಟುಗಳೆಂಬುದೇ ನಮಗೆ ಧನ್ಯತೆ. ನಮ್ಮ ಖಿನ್ನತೆಯನ್ನು

ಪ್ರತ್ಯೇಕವಾಗಿ ನಿನಗೆ ಹೇಳಬೇಕಾಗಿಲ್ಲ ಇದಕ್ಕೆ ನೀನಿಲ್ಲಿ ಹೀಗೆ ಮೆಯ್ಯಾಗಿಸಿಕೊಂಡುದೇ ನಿದರ್ಶನ. ನಮ್ಮ ನೋವೇ ನಿನ್ನದೂ ಆಗಿರಬೇಕೆಂದು ತಿಳಿಯುತ್ತೇವೆ. ನಮಗೆ ಹಿರಿಯಣ್ಣನಾಗಿ ದುಃಖವನ್ನು ದೂರಮಾಡಬೇಕಾದವನು ನೀನು.

**ಪೂರ್ವಿ–ಝಂಪೆ**

ನಾನು ಸಹ ನಿಮ್ಮಂತೆ ನೋವನನುಭವಿಸುತಿಹೆ

**ಆಕಾಶ** ಮಾನವರ ಮತಿಗೇಡಿತನಕೆಯೇನೆಂಬೆ ?

ಏನಿದೆತ್ತಣ ಸ್ವಾರ್ಥ ಸುಖಭೋಗದಾಕಾಂಕ್ಷೆ !

ಹಾನಿಯೇ ಪಂಚಭೂತಗಳಯಿರುವಿಕೆಗೆ ॥ ೧ ॥

ಸೋದರರೆ, ನಿಮ್ಮಂತೆ ನಾನೂ ನೋವನ್ನು ಅನುಭವಿಸುತ್ತಿದ್ದೇನೆ ಸೃಷ್ಟಿಯ ಜೀವರಾಶಿಯೆಲ್ಲ ಸದಾ ಸುಖದಿಂದ, ನೆಮ್ಮದಿಯಿಂದ ಬದುಕಲೆಂದೇ ನಮ್ಮ ಸೃಷ್ಟಿಯಾಯಿತು. ಆದರೆ ಮತಿಗೇಡಿ ಮಾನವರಿಂದ ನಾವೇ ನೋಯುವುದಾಯಿತು. ಒಂದು ಕಾಲಕ್ಕೆ ದಾನವರು ಪರಪೀಡಕರಾಗಿದ್ದರು. ಈಗ ಮಾನವರೇ ದಾನವನಾಗಿದ್ದಾರೆ ಎಲ್ಲದರ ಮೇಲೂ, ಎಲ್ಲದರ ಮೇಲೂ, ಅವರ ದುರಾಕ್ರಮಣ ನಡೆಯುತ್ತಿದೆ. ಅವರ ಹೊಲಸು ಮನಸ್ಸಿನಿಂದಾಗಿ ನಮ್ಮನ್ನು ಹೊಲೆಗೆಡಿಸುತ್ತಿದ್ದಾರೆ. ಅವರಿನ್ನೂ ನಮ್ಮನ್ನು ತಿಳಿದಿಲ್ಲ.

**ಭಾಮಿನಿ–ಮೋಹನ**

ನಾವುಯಿರದಿರಲೀ ಪ್ರಪಂಚದ

ಜೀವಸಂಕುಲ ಬದುಕಲುಂಟೇ?

ಕೋವಿದರುಯಿದನರಿತು ನಮ್ಮನು ಪೂಜಿಸಿದರಂದು॥

ದೇವಕೃಷ್ಣನು ಪರಿಸರವತಾ

ನಾವ ತೆರದಲಿ ಕಾಯ್ದನೆಂಬುದ

ಗೋವಳರು ತಾವರಿತುನಡೆದುದ ಮರೆತರೇ ಜನರು ॥ ೧ ॥

ಸೋದರರೆ, ನಾವಿಲ್ಲವಾದರೆ ಜೀವಸಂಕುಲವೇ ನಾಶವಾದೀತು. ಇದನ್ನು ತಿಳಿದ ಪ್ರಾಜ್ಞರು ಪ್ರಕೃತಿಪೂಜೆಯನ್ನು ಮಾಡಿದರು. ಆ ಮೂಲಕ ಪರಿಸರ ಸಂರಕ್ಷಣೆ ಮಾಡಿದರು. ಭಗವಾನ್ ಶ್ರೀಕೃಷ್ಣ ಇಳೆಯ ಭಾರವನ್ನು ಇಳಿಸಲೆಂದೇ ಅವತರಿಸಿ ಬಂದವನು. ಆತ ನಂದಗೋಕುಲದಲ್ಲಿ ಗೋಪಾಲರೊಂದಿಗೆ ಇರುತ್ತ, ಮಳೆಗಾಗಿ ಇಂದ್ರನನ್ನು ಪೂಜಿಸುವುದನ್ನು ನೋಡಿದ. ಮಳೆಯಾಗುವುದು ಬೆಟ್ಟಗುಡ್ಡಗಳಿಂದ, ನೀವು ಗಿರಿ ಪೂಜೆಯನ್ನು ಮಾಡಿರೆಂದು ಬೋಧಿಸಿದ. ಗೋವಳರು ಗಿರಿಪೂಜೆ ಮಾಡಿದರು. ಇಂದ್ರ ಕುಪಿತನಾಗಿ ಧಾರಾಕಾರ ಮಳೆಯನ್ನು ಸುರಿಸಿದ. ಗೋಪಗೋಪಿಕೆಯರು ಕಂಗೆಟ್ಟರು. ಕೃಷ್ಣ ಗಿರಿಯನ್ನು ತನ್ನ ಕಿರುಬೆರಳಿಂದ ಎತ್ತಿ ಹಿಡಿದ. ಮಳೆನಿಂತಿತು; ಇಂದ್ರನ ಗರ್ವಾಪ್ರಹಾರವಾಯಿತು. ಅಲ್ಲೇ ಯಮುನಾ ನದಿ ಹರಿಯುತ್ತಿತ್ತು, ನದಿಯ ಮಡುವಿನಲ್ಲಿ ಕಾಳಿಂಗನಿದ್ದ. ಅವನು ಕಾರಿದ ವಿಷದಿಂದ ನೀರೆಲ್ಲ ವಿಷವಾಗಿ, ಗೋವುಗಳು ನೀರ್ಕುಡಿದು ಸಾಯುತ್ತಿದ್ದವು. ಕೃಷ್ಣ ಕಾಳಿಂಗಮರ್ದನಗೈದು, ಗೋವುಗಳ, ಗೋಪಾಲರ ರಕ್ಷಣೆ ಮಾಡಿದ. ಜಲಮಾಲಿನ್ಯದಿಂದಾಗುವ ಹಾನಿಯನ್ನು ತಪ್ಪಿಸಿದ. ಪರಿಸರ ಸಂರಕ್ಷಣೆ ಮಾಡಿದ. ಭಾಗವತದಲ್ಲಿ ಈ ಕಥೆಯಿದೆ. ಮನುಷ್ಯರಿದನ್ನು ಓದಿದ್ದಾರೆ; ಕೇಳಿದ್ದಾರೆ. ಆದರೆ ಮರೆತು ಬಿಟ್ಟಿದ್ದಾರೆ. ಬೇಕಾದುದನ್ನು ಮರೆಯುವುದರಲ್ಲಿ ಮನುಷ್ಯರೇ ಮೊದಲಿಗರು. ಇಂತಹ ಮಾನವರಿಗೆ ನಾವು ಏನೆನ್ನಬೇಕು?

**ಕೇದಾರಗೌಳ–ಝಂಪೆ**

ಎಂದ ಮಾತನು ಕೇಳುತ । ವಾಯುತಾ
**ವಾಯು** ನಂದು ಕೋಪವ ತಾಳುತ ॥
ಮಂದಮತಿ ಮಾನವರಿಗೆ। ಕಡೆಗಾಲ
ಬಂದಿಹುದು ನೋಡೆ ಹೀಗೆ ॥ ೧ ॥

'ಓದುವುದು ಶಾಸ್ತ್ರ ಇಕ್ಕುವುದು ಗಾಳ' ಇದು ಮನುಷ್ಯರ, ಅದರಲ್ಲೂ ವಿದ್ಯಾವಂತರೆನಿಸಿಕೊಂಡವರ ಸ್ವಭಾವ. ಈ ಪರಿಸರಕ್ಕೆ ಮನುಷ್ಯರಿಂದಾದಷ್ಟು ಹಾನಿಯನ್ನು

ಯಾವ ದುಷ್ಟಪ್ರಾಣಿಯೂ ಮಾಡಿರಲಾರದು. 'ಕೆಡುವ ಕಾಲಕ್ಕೆ ಬುದ್ಧಿಯಿಲ್ಲ; ಸಾಯುವ ಕಾಲಕ್ಕೆ ಮದ್ದಿಲ್ಲ' ಎಂಬ ಲೋಕೋಕ್ತಿಯಿದೆ. ಮನುಕುಲದ ಸರ್ವನಾಶದ ಕಾಲ ಸಮೀಪಿಸುತ್ತಿದೆ. ಅದಕ್ಕಾಗಿ ನಾನೇ ಮುಂದಾಗುತ್ತೇನೆ.

**ಮಾರವಿ–ಏಕ**

ಚಂಡಮಾರುತನಾಗುತ ನನ್ನ ಪ್ರ ಚಂಡ ಶಕ್ತಿಯ ತೋರುತ ॥
ದಿಂಡುಗೆಡಹುತ ಕಲ್ಮರ । ನಿಲ್ಲಿಸುವೆ । ಪುಂಡ ಮಾನವರ ಉಸಿರ ॥೧॥

ಚಂಡ ಮಾರುತನಾಗಿ ನನ್ನ ಪ್ರಪಂಡ ಶಕ್ತಿಯನ್ನು ತೋರುತ್ತೇನೆ. ನನ್ನ ಬಿರುಬೀಸಿನ ಹೊಡೆತಕ್ಕೆ ಮನುಷ್ಯರೇಕೆ; ಕಲ್ಮರಗಳು ಧರೆಗುರುಳಬೇಕು. ಉಸಿರಾಟವಿದ್ದರೆ ತಾನೇ ಮನುಷ್ಯನ ಏರಾಟ ಹಾರಾಟಗಳು? ಪ್ರಾಣ ವಾಯುವನ್ನು ಸ್ತಬ್ಧಗೊಳಿಸಿದರೆ ಈ ನರಪಿಳ್ಳೆಗಳಿಗೆ ಉಳಿವೆಲ್ಲಿ?

**ಮಾರವಿ–ಏಕ**

ಥಟ್ಟನೆ ಸಿಡಿದೇಳುತಲಾ ಅಗ್ನಿಯು! ನಿಟ್ಟಿಸಿ ಮಾರುತನ ॥ ೧ ॥
ಅಗ್ನಿ ಒಟ್ಟಿಗೆ ನೀನಿರೆ ಸಚರಾಚರವನು। ಸುಟ್ಟುರುಹುವೆನೀಗ ॥ ೨ ॥

ಈ ಅಗ್ನಿಯೊಮ್ಮೆಗೆ ಸಿಡಿದು ನಿಂತನಾದರೆ, ನೀನು ನನ್ನ ಜೊತೆಗಿದ್ದರೆ, ಕ್ಷಣ ಮಾತ್ರದಲ್ಲಿ ಸಚರಾಚರವನ್ನು ಸುಟ್ಟು ಭಸ್ಮೀಭೂತಗೊಳಿಸುತ್ತೇನೆ. ಅಗ್ನಿ ಪ್ರಕೋಪದ ಮುಂದೆ ಈ ಹುಲು ಮಾನವರೆಲ್ಲಿ ? ಸುಡುಮಾನವನ ಸುಡುಬಾಳಿಗೆ ಈ ಸುಡುಬೆಂಕಿಯೇ ಕೊನೆಯಾಗಲಿ!

**ಸೌರಾಷ್ಟ್ರ– ತ್ರಿವುಡೆ**

ವರುಣ ವರುಣ ನಾ ಖತಿಯಾತೆನಾದರೆ
ಅರೆಚಣದೊಳೀ ಜೀವರಾಶಿಗೆ
ತಿರೆಯ ಬಾಳೇಯಿಲ್ಲವೆನಿಸುವೆ । ನರನದೆತ್ತ ॥ ೧ ॥

ಈ ವರುಣನು ಭೋಂಕನೆ ಬಾಯ್ದೆರೆದೆನಾದರೆ, ಕ್ಷಣ ಮಾತ್ರದಲ್ಲಿ ಎಲ್ಲವನ್ನು ನುಂಗಿನೊಣೆಯ ಬಲ್ಲೆ, ಎಲ್ಲಿ ಮಾನವ ನಿರ್ಮಿತ ಸೌಧಗಳು? ಎಲ್ಲಿ ಹವಾನಿಯಂತ್ರಿತ ನಿವಾಸಗಳು? ಈ ಪ್ರಪಂಚದ ನಾಕನೆಯ ಮೂರು ಪಾಲು ನೀರು. ಒಂದು ಪಾಲು ಈ ನೆಲ ! ನೆಲದ ಮೇಲೆ ಮಾನವರ ಅಟ್ಟಹಾಸವೆ? ತೋರುತ್ತೇನೆ ನನ್ನ ಶಕ್ತಿಯನ್ನು.

**ಆರಭಿ–ಝಂಪೆ**

ವರುಣಾಗ್ನಿ ವಾಯುಗಳು ಕನಲಿ ಹೂಂಕರಿಸುತಿರೆ
ತಿರೆ ತನ್ನ ಸಹನೆಯನ್ನು ನೀಗಿಕೊಳದೆ ॥
**ಪೃಥ್ವಿ** ನರರಾಕ್ರಮಣಕಿಂತು ಕೆರಳಿನಿಂತರೆ ಹೇಗೆ?
ಪೆರತಾವ ಜೀವಿಯಿಂ ಹಾನಿಯಿಹುದೆ! ॥ ೧ ॥

ವರುಣಾಗ್ನಿ ವಾಯುಗಳೇ, ಸಾವಧಾನ; ಸಾವಧಾನ! ಕೋಪವೆಂಬುದು ಅನರ್ಥ ಸಾಧನ. ಕೇವಲ ಮಾನವರಿಂದ ಪರಿಸರಮಾಲಿನ್ಯ ತಲೆದೋರಿತೆಂದು, ಸರ್ವನಾಶಕ್ಕೆ ಮುಂದಾದರೆ, ಉಳಿದ ಜೀವಿಗಳ ಪಾಡೇನು! ಬೇರಾರಿಂದಲೂ ಹಾನಿಯಾಗಿಲ್ಲತಾನೆ? ಈಗ ನಿಮಗೆ ಬೇಕಾದುದು ಸಹನೆ

**ಸಾಂಗತ್ಯ–ರೂಪಕ, ರಾಗ ಮೋಹನ**

ಸಹನೆಗೆ ಮಿಗಿಲಾದ ಶಕ್ತಿ ಬೇರಿಲ್ಲವು,
ತಹುದೆಲ್ಲ ತೆರನಾದ ಗೆಲವು॥
ಬಹುಜನರೀಸತ್ಯ ತಿಳಿಯದೆ ಕೆಟ್ಟರು
ಇಹಸುಖದಾಶೆಯುಳ್ಳವರು ॥ ೧ ॥

ಸೋದರರೆ, ಈ ಪ್ರಪಂಚದಲ್ಲಿ ಬಹುದೊಡ್ಡ ಶಕ್ತಿಯೆಂದರೆ ಸಹನೆ ಮಾತ್ರ. ಎಲ್ಲ ಕಡೆಯಿಂದಲೂ ಗೆಲುವನ್ನು ಸಾಧಿಸುವ ಶಕ್ತಿ ಸಹನೆಗಿದೆ. ಅನೇಕರು ಬೇರೆಯವರ ಸಹನೆಯನ್ನು

ದೌರ್ಬಲ್ಯವೆಂದು ತಿಳಿದಿದ್ದಾರೆ. ಸಹನೆಯಿಲ್ಲದೆ ಕೆಟ್ಟಿದ್ದಾರೆ; ಕೆಡಿಸಿದ್ದಾರೆ; ನಾಶಮಾಡಿದ್ದಾರೆ; ನಾಶವಾಗಿದ್ದಾರೆ. ಯಾರು ನಿಯತಿಯನ್ನು ಮೀರಿದರೂ ನಾವು ಮೀರಲಾಗುದು. ನಾವು ದಾನವರಲ್ಲ; ಮಾನವರಲ್ಲ; ದೇವಸಮಾನರು. ಸಮಾಧಾನ ತಾಳಿರಿ ಹಿರಿಯಣ್ಣ ಏನೆನ್ನುವನೋ ಕೇಳೋಣ;

**ಕಾಂಭೋದಿ–ಝಂಪೆ**

**ಆಕಾಶ :** ತಾಳಿದವ ಬಾಳುವನುಯೆಂಬ ಮಾತಿದೆ ಸತ್ಯ
ಹಾಳಾಗೆ ಪರಿಸರವು ಸುಮ್ಮನಿರಬಹುದೆ ?
ಕೇಳುವರೆ ಹೇಳುವರೆ ನಮಗೊಬ್ಬನಿಹನಾತ್ಮ
ವೇಳೆಗಳೆಯದೆ ಕಂಡು ತಿಳಿಯುವುದು ಹಿತಕೆ ॥

ಸೋದರರೆ, ಪೃಥ್ವಿಯಲ್ಲದೆ ಮತ್ತಾರು ಹೀಗೆ ಹೇಳುವವರು. ಆಕೆ ಸಹನೆಗೆ ಪರ್ಯಾಯ ಪದ. ಹೀಗಾಗಿಯೇ ಅವಳನ್ನು ಭೂಮಾತೆ, ಭೂದೇವಿಯೆನ್ನುವುದು. ತಾಯಿಯಾದವಳು ಎಂದಿಗೂ ತನ್ನ ಮಕ್ಕಳಲ್ಲಿ ಸಹನೆಯನ್ನು ಕಳೆದು ಕೊಳ್ಳುವುದಿಲ್ಲ. ಹಾಗೆ ನೋಡಿದರೆ ನಮಗಿಂತ ಹೆಚ್ಚು ನೊಂದು ಬೆಂದವಳಾಕೆ. ಆದರೆ, ನಮ್ಮೆಲ್ಲರ ಮೇಲೂ ಆರೋಪವಿದೆಯಲ್ಲ! ಹೀಗಾಗಿ ಸುಮ್ಮನಿರುವುದುದಲ್ಲ, ಕೇಳುವುದಕ್ಕೆ ಹೇಳುವುದಕ್ಕೆ ನಮಗೊಬ್ಬ ಹಿರಿಯನಿದ್ದಾನೆ. ಅವನೇ ನಮ್ಮ ಹುಟ್ಟಿಗೆ ಕಾರಣನಾದ ಪರಮಾತ್ಮ. ಬನ್ನಿ; ಅವನನ್ನೇ ಕೇಳೋಣ. ಈ ಕಾರಣದಿಂದಾದರೂ ಆತ್ಮದರ್ಶನವಾಗಲಿ.

**ದ್ವಿಪದಿ**

ಸರಿಯೆಂದು ಪಂಚಭೂತಗಳೊಂದು ಗೂಡಿ
ತ್ವರಿತದಲಿ ಬಂದು ಪರಮಾತ್ಮನನು ನೋಡಿ ॥ ೧ ॥
ಪರಿಸರದ ಮಾಲಿನ್ಯ ಹೆಚ್ಚಿಹುದು ತಂದೆ
**ಆಕಾಶ** ಪರಿತಾಪದಲಿ ನೊಂದು ಬಂದಿಹೆವು ಮುಂದೆ ॥ ೨ ॥
ಸರಿದಾರಿ ತೋರಿದರೆ ಸೊಗದ ಬದುಕುಂಟು
ಮರೆತೆಯಾದರೆ ಜೀವತತಿಗೆ ಕೊನೆಯುಂಟು ॥ ೩ ॥

ಅಯ್ಯಾ ತಂದೆಯೆ, ನೀನು ನಮ್ಮ ಹುಟ್ಟಿಗೆ ಕಾರಣನಾದರೂ, ನಾವು ನಿನ್ನಲ್ಲಿ ಬಂದುದು ಅಪೂರ್ವ. ಈಗ ಅನಿವಾರ್ಯವಾಗಿ ಬರಲೇಬೇಕಾಯಿತು. ನಿನ್ನ ನಿಯತಿಯಂತೆ ಪಂಚಭೂತಗಳಾದ ನಾವು ಸರ್ವಹಿತರಾಗಿಯೇ ಉಳಿದವರು. ಆದರೀಗ ನಮ್ಮ ಸುಖಕ್ಕೇ ಭಂಗವೊದಗಿದೆ. ಮನುಷ್ಯರಿಂದು ಮನಬಂದಂತೆ ನಮ್ಮನ್ನೆಲ್ಲ ಮಾಲಿನ್ಯಗೊಳಿಸಿದರು. ಪರಿಸರ ಹಾಳಾಯ್ತೆಂದು ನಮ್ಮ ಮೇಲೆ ಆರೋಪವಿದೆ. ಇಂತಹ ಸಂಕ್ರಮಣ ಕಾಲದಲ್ಲಿ ನಮ್ಮ ಬದುಕೂ ದುಸ್ತರವೆನಿಸಿದೆ. ನಮ್ಮ ನೋವನ್ನು ನಿನ್ನಲ್ಲಲ್ಲದೆ ಮತ್ತಾರಲ್ಲಿ ಹೇಳುವುದು ತಂದೆ. ಸರಿಯಾದ ದಾರಿತೋರು ನಮಗೆ.

**ಜುಂಜೋಟ-ಅಷ್ಟ**

ಉಂಡವ ಹರಸಬೇಕಿಲ್ಲ। ಮನ ।
ನೊಂದವ ಕೈಯೆತ್ತಿ ಶಪಿಸಬೇಕಿಲ್ಲ ॥

**ಪರಮಾತ್ಮ** ಹಿಂದು ಮುಂದಿನ ನೆಲೆಯೊಂದಿನಿತರಿಯದೆ ।
ಮಂದಮತಿಗಳು ತಮಗೆ ತಾವೇ ।
ತಂದುಕೊಂಡರು ಕಷ್ಟ ಕೋಟಲೆ ॥ ೧ ॥

ಹೌದು ಮಕ್ಕಳೇ 'ಉಂಡವ ಹರಸಬೇಕಿಲ್ಲ ನೊಂದವ ಶಪಿಸಬೇಕಿಲ್ಲ' ಎಂಬ ಲೋಕೋಕ್ತಿ-ವೇದೋಕ್ತಿಯೇ ಸರಿ. ಸರ್ವಜೀವರ ಹಿತಕ್ಕಾಗಿ ನಿಮ್ಮನ್ನು ಸೃಷ್ಟಿಸಿದೆ. ಆದರೆ ಮೂರ್ಖ ಮಾನವರು ಈ ಸೃಷ್ಟಿಯಿರುವುದೇ ತನ್ನ ಭೋಗಕ್ಕಾಗಿಯೆಂದು ತಿಳಿದು ದುರಾಕ್ರಮಣ ಮಾಡಿದ್ದಾರೆ. ಪಂಚಭೂತಗಳಲ್ಲಿ ಒಂದು ಕೆಟ್ಟರೂ ಕೂಡ ಸೃಷ್ಟಿಯ ಸಮತೋಲನ ತಪ್ಪುತ್ತದೆ. ಆಗಬಾರದ್ದು ಆಗುತ್ತದೆ. ನೀವು ನೊಂದಿರುವಿರಿ. ಇದರ ಫಲವನ್ನು ನೋವಿಗೆ ಕಾರಣರಾದವರು ಅನುಭವಿಸುತ್ತಾರೆ. ಮನುಷ್ಯರಿಂದು ಮನುಷ್ಯರಾಗಿ ಬದುಕುತ್ತಿಲ್ಲ. ಅವರ ರಾಕ್ಷಸೀ ಕೃತ್ಯಕ್ಕೆ ಶಿಕ್ಷೆಯಾಗಲೇಬೇಕು. ಈ ಶಿಕ್ಷೆಯೇ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಕಷ್ಟ ಕೋಟಲೆಗಳು. ತುಸುಕಾಲ ಸಹನೆಯಿಂದ ಕಾದುನೋಡಿರಿ.

ನೋಡುವೆ ನಾನು ದೂರದಲಿ। ನಿಜ
ನೋಡಿ ನೋಡದ ಹಾಗೆ ಗಾಢ ಮೌನದಲಿ ॥
ನೋಡಿ ನೀವೆಲ್ಲರು ಮಾತಿನಿತಾಡದೆ
ರೂಢಿಯೇ ಭಯ ಭೀತಿಗೊಳ್ಳುವ
ಕೇಡುಗಳ ಪಾಡುಗಳನೊಟ್ಟಿಗೆ ॥ ೨ ॥

ಲೋಕದಲ್ಲಿ ಏನೂ ತಿಳಿಯದವರಿಗೆ ತಿಳಿಯ ಹೇಳುವುದು ಸುಲಭ. ತಿಳಿದೂ ತಿಳಿಯದಂತೆ ವರ್ತಿಸುವವರಿಗೆ ತಿಳಿಯ ಹೇಳುವುದೆಂದರೆ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ. ಕೋಣನ ಮುಂದೆ ವೀಣೆ ನುಡಿಸಿದಂತೆ. ಚಿಕ್ಕ ಮಕ್ಕಳು ಆಟಿಕೆಯೆಂದು ಚೇಳನ್ನು ಹಿಡಿಯಹೋದರೆ ಆದು ಕಚ್ಚದಿರುತ್ತದೆಯೆ? ಉರಿಯುವ ಬೆಂಕಿಯನ್ನು ಹೂವೆಂದು ಮುಟ್ಟಿದರೆ ಸುಡದೆ ಸುಮ್ಮನಿರುತ್ತದೆಯೇ! ಆದರೆ ಇವರೇನೂ ಮಕ್ಕಳಲ್ಲ. ಮುಂದಾಗುವುದನ್ನು ನಾನು–ನೋಡಿಯೂ ನೋಡದವನಂತೆ ಸುಮ್ಮನಿರುತ್ತೇನೆ. ನೀವೂ ಸುಮ್ಮನಿರಿ. ಮುಂದಾಗುವ ಘಟನೆಗಳು ರುದ್ರಭೀಕರವಾಗಲಿವೆ. ಆಗ ಮನುಷ್ಯ ಕಣ್ತೆರೆಯುತ್ತಾನೆ. ಪಂಚಭೂತಗಳ ಪ್ರಕೋಪ ಏನೆಂಬುದನ್ನು ಜಗತ್ತು ನೋಡಲಿ. ನೀವೀಗ ಸ್ವಸ್ಥಾನ ಸೇರಿರಿ.

******

(ರಂಗವನ್ನು ಕತ್ತಲು ಕವಿಯುತ್ತದೆ. ಗುಡುಗು ಸಿಡಿಲುಗಳ ಘನಗರ್ಜನೆ ಕೇಳುತ್ತದೆ. ಮಿಂಚು ಮಿಂಚುತ್ತದೆ. ಮುಸಲಧಾರೆಯ ಮಳೆ ಸುರಿಯುತ್ತದೆ; ಚಂಡ ಮಾರುತ ಬೀಸುತ್ತಿದೆ ಜಲಪ್ರಳಯ ಆವರಿಸುತ್ತದೆ. ಎಲ್ಲವೂ ಶಬ್ದಗಳ ಮೂಲಕ; ಅಥವಾ ದೃಶ್ಯಗಳ ಮೂಲಕ.)

**ಕಾಂಭೋದಿ – ಝಂಪೆ**

**ಸಂತ್ರಸ್ತ ಧನಿಕ** ಮನೆಯಿಲ್ಲ ಮಠವಿಲ್ಲ ಮಡದಿ ಮಕ್ಕಳುಯಿಲ್ಲ॥
ಧನಕನಕವೆಲ್ಲವೂ ಮಣ್ಣುಪಾಲು ॥
ದನವಿಲ್ಲ ಕರುವಿಲ್ಲ ಬೆಳೆಯಿಲ್ಲ, ನೆಲೆಯಿಲ್ಲ ।
ದಿನವೊಂದರಲಿಯೆಲ್ಲ ನೀರುಪಾಲು ॥ ೧ ॥

ಹೌದು; ಬೆಟ್ಟದ ತುದಿಯಲ್ಲಿ ಹವಾನಿಯಂತ್ರಿತವಾದ ಭವ್ಯ ಬಂಗಲೆಯನ್ನು ಮಾಡಿಕೊಂಡಿದ್ದೆ. ಅದು ಅರಮನೆಯಂತಿತ್ತು. ನನ್ನ ಅಂತಸ್ತಿನ ಪ್ರತೀಕವಾಗಿತ್ತು. ಪರಂಪರೆಯಿಂದ ಬಂದ ಮಠಕ್ಕೆ ಚಿನ್ನದ ತಗಡನ್ನು ಹೊದಿಸಿದ್ದೆ. ಮನದಿಂಗಿತವರಿತ ಮುದ್ದು ಮಡದಿಯಿದ್ದಳು. ಚೆನ್ನಾಟವಾಡಿ ತಣಿಸುವ ಮಕ್ಕಳಿದ್ದರು. ಗೋಶಾಲೆಯಿತ್ತು. ಹಾಲ್ಗರೆವ ಹಸುಗಳಿದ್ದುವು. ಹಾಲ್ಕುಡಿದು ಚಂಗನೆ ಚಿಗಿದೋಡುವ ಕರುಗಳಿದ್ದವು. ಆದರೀಗ ಒಂದೂಯಿಲ್ಲ! ಒಂದೇ ಒಂದು ದಿನ ಸುರಿದ ಮುಸಲಧಾರೆಯ ಮಳೆಯಿಂದಾಗಿ, ಭೂಕುಸಿತದಿಂದಾಗಿ, ಎಲ್ಲವೂ ಮಣ್ಣುಪಾಲಾಯ್ತು; ನೀರು ಹಾಳಾಯ್ತು! ಕಾರ್ಯನಿಮಿತ್ತ ದೂರಹೋಗಿದ್ದ ನಾನು, ಸುದ್ದಿತಿಳಿದು ಓಡೋಡಿ ಬಂದೆ. ಎಲ್ಲಿ ನನ್ನದು; ಎಲ್ಲಿ ನನ್ನವರು? ನಾನೇಕೆ ಬದುಕಿ ಉಳಿದೆನೋ, ಶಿವನೇ ಏನು ಮಾಡಲಿ; ಹೇಗೆ ಬದುಕಲಿ?

**ಆನಂದಭೈರವಿ, ರೂಪಕ ತಾಳ**

**ಸಂತ್ರಸ್ತೆ** ಇಳೆ ಭೋಂಕನೆ ಬಾಯ್ದೆರೆಯಿತು ಅಯ್ಯೋ । ಉಳಿಯುವುದೆಂತಕಟ
ಸುಳಿಗಾಳಿಗೆ ಕಲ್ಮರಗಳು ಕೆಡೆದುವು। ನೆಲೆಗಾಣೆನು ಅಕಟ ॥ ೧ ॥

ಬೆಟ್ಟದ ಇಳಿಜಾರಿನಲ್ಲಿ ಪುಟ್ಟದೊಂದು ಮನೆಮಾಡಿಕೊಂಡಿದ್ದೆ. ಬೇರೆಯವರಲ್ಲಿ ಕೂಲಿಮಾಡಿ ಬದುಕಿದ್ದೆ. ಈಗ ನೋಡುತ್ತಿದ್ದೇನೆ. ಭೂಮಿ ಭೋಂಕನೆ ಬಾಯ್ದೆರೆದು ಎಲ್ಲವನ್ನು ನುಂಗುತ್ತಿದೆ. ಹೇಗಾದರು ಬದುಕಿದರೆ ಸಾಕೆಂದು ಹೊರಬಂದು ನೋಡುತ್ತಿದ್ದೇನೆ. ಚಂಡಮಾರುತನ ಹೊಡೆತಕ್ಕೆ ಕಲ್ಲು ಬಂಡೆಗಳು, ಹೆಮ್ಮರಗಳು ಉರುಳುರುಳಿ ಪ್ರಪಾತಕ್ಕೆ ಬೀಳುತ್ತಿವೆ! ಅಯ್ಯೋ ಗತಿಯೇ; ಯಾರಲ್ಲಿ ಮೊರೆಯಿಡಲಿ? ಬದುಕುವುದಾದರೂ ಎಲ್ಲಿ ?

ಏನಿದೇನು ಜಲಪ್ರಳಯವು ಬಂತೇ। ಏನ ಮಾಡಲಕಟ!
**ರೈತ** ಮಾನವ ಜೀವನ ದುಸ್ತರವಾಯಿತೆ। ಏನಿದು ಅಕಟಕಟ ॥ ೨ ॥

ನನ್ನ ಜೀವನದಲ್ಲೇ ಇಂತಹ ಮಳೆಯ ಹಾವಳಿಯನ್ನು ಕಂಡಿಲ್ಲ ಜಲಪ್ರಳಯವೆಂಬ ಮಾತನ್ನು ಕೇಳಿದ್ದೆ. ದೂರದರ್ಶನಗಳಲ್ಲಿ ಜಲಪ್ರಳಯದ ರುದ್ರತಾಂಡವ ನೃತ್ಯವನ್ನು ನೋಡಿದ್ದೆ. ಈಗ ಕಣ್ಮುಂದೆ ಕಾಣುತ್ತಿರುವ ಭೀಕರ ದೃಶ್ಯ–ನನ್ನೆದೆಯನ್ನು ನಡುಗಿಸುತ್ತಿದೆ. ಬಾನು ಬಿರಿಯಿತೇ ಹೇಗೆ ? ಅಕಟಕಟಾ! ಮುಂದೇನುಗತಿ!

**"ಲಾವಣಿ ಮಟ್ಟು"**

ಫಕೀರ

ಯಾರಿಗು ಯಾರಿಲ್ಲವಣ್ಣ । ಅಣ್ಣಾ ॥ ಪಲ್ಲ
ಊರುಕೇರಿಗಳೆಲ್ಲ ಬರಿದಾದುದಣ್ಣಾ ॥ ಅನುಪಲ್ಲ ॥
ಮಾರಿಯಾದಳು ಭೂಮಿ ತಾಯಿ ತಾನೇತಕೊ
ದಾರಿಗಾಣದೆ ಹೋಯ್ತು । ಊರ ಬಿಟ್ಹೋಡೆ ॥ ೧ ॥

ಹೌದಣ್ಣಾ ಹೌದು; 'ಯಾರಿಗೂ ಯಾರಿಲ್ಲ ಎರವಿನ ಸಂಸಾರ । ನೀರ ಮೇಲಿನ ಗುಳ್ಳೆ ನಿಜವಲ್ಲ ಹರಿಯೇ' ಎಂದ ದಾಸರ ಮಾತು– ಹೌದಣ್ಣಾ ಹೌದು. ಮೇಲಿನಿಂದ ಮಳೆ ಸುರಿಯುತ್ತ, ಕೆಳಗಿನ ಕೆರೆ–ಹಳ್ಳ–ಹೊಲದಲ್ಲಿ ನೀರಿನ ಗುಳ್ಳೆ ಕಾಣುತ್ತದೆ. ಕ್ಷಣಾರ್ಧದಲ್ಲಿ ಗುಳ್ಳೆಯೊಡೆದು ನೀರಲ್ಲಿ ಕಾಣದಾಗುತ್ತದೆ. ನಮ್ಮ ಬದುಕು ಕೂಡ ಹೀಗೆಯೇ ಅಣ್ಣಾ! ನಮ್ಮ ಹಿರಿಯರು ಈ ನೆಲವನ್ನು ಭೂಮಾತೆಯೆಂದರು. ಭೂದೇವಿಯೆಂದು ಪೂಜಿಸಿದರು. ಆದರೀಗ ಆಕೆಯೇ ಮಾರಿಯಾಗಿ ಹೋದಳಲ್ಲ! ಬಾಯ್ದೆರೆದು ಎಲ್ಲವನ್ನೂ ನುಂಗುತ್ತಿದ್ದಾಳೆ ಏಕೆ ಹೀಗಾಗುತ್ತಿದೆ?

ದೇವರು ಕೈ ಬಿಟ್ಟನೇನು। ಪರಿಕಿಸೆ
ನಾವೆಸಗಿದ ಪಾಪ ಮಿತಿಮೀರಿತೇನು? ॥
ನೋವಿನ ಬದುಕಿಂದ ಸಾವೆ ಲೇಸಾಗಿತ್ತು
ಜೀವನದಿಳಿಗಾಲದಲಿಯಿಂಥ ಪಾಡೇ ॥ ಯಾರಿಗೂ.....॥ ೨ ॥

ಹೌದಣ್ಣಾ ಹೌದು; ನಾವೆಲ್ಲ ದೇವರೆ ಗತಿಯೆಂದು ನಂಬಿದವರು. 'ತೇನವಿನಾ ತೃಣಮಪಿ ನ ಚಲತಿ' ಅವನ ಹೊರತು ಹುಲ್ಲುಕೂಡ ಅಲುಗಾಡದು ಎಂದರು ತಿಳಿದವರು. ಈಗ ನೋಡಿದರೆ ದೇವರೇ ಕೈಬಿಟ್ಟಂತೆ ಕಾಣುತ್ತಿದೆ. ನಾವು ಮಾಡಿದ ಪಾಪ ಮಿತಿಮೀರಿತು. ಹೀಗಾಗಿ ಗೋಳಿಡುವಂತಾಯಿತು. ಊರುಕೇರಿಗಳೆಲ್ಲ ಬರಿದಾದುವು. 'ಮಾಡಿದುಣ್ಣೋ ಮಾರಾಯ' ಎಂದಿರುವುದು ಸತ್ಯವಾಯಿತು. ನಾನಂತೂ ಫಕೀರ. ಊರೂರು ಅಲೆದಾಡುವುದೇ ನನ್ನ ಕಾಯಕ ಬದುಕಿನ ಕೊನೆಗಾಲದಲ್ಲಿ ಇದನ್ನೆಲ್ಲ ನೋಡುವುದಕ್ಕಿಂತ ಸಾಯುವುದೇ ಒಳ್ಳೆಯದಿತ್ತು. ದೇವರೇ, ನೀನೂ ಕೈ ಬಿಟ್ಟೆಯ?

****

**ಸಾಂಗತ್ಯ–ರೂಪಕ**

ನಡೆತಂದ ವೃದ್ಧ ಭೂಸುರನೋರ್ವ ಕೋಲೂರಿ
ಗಡಗಡ ನಡುಗುತ್ತ ಮೆಲ್ಲ ॥

**ವೃದ್ಧ ಬ್ರಾಹ್ಮಣ** ಬೆಡಗು ಬಿನ್ನಾಣದ ಜನರೆಲ್ಲಿ, ಊರೆಲ್ಲಿ ?
ಸಡಗರವೊಂದಿನಿತಿಲ್ಲ ॥ ೧ ॥

ಹೌದು; ಪ್ರತಿಯೊಬ್ಬರಿಗೂ ಅವರವರ ಹುಟ್ಟೂರೇ ಚಂದ. ಆದರೆ ಈ ಊರು ಹಾಗಲ್ಲ; ಎಲ್ಲರಿಗೂ ಚಂದ. ನಿತ್ಯವೂ ಹಚ್ಚನೆಯ ಹಸಿರಿನಿಂದ ಕಂಗೊಳಿಸುವ ಪ್ರಕೃತಿ. ಮೈಮನಗಳನ್ನು ತಣಿಸುವ ತಂಗಾಳಿ. ಅಲ್ಲಲ್ಲಿ ನೀರ ಝುರಿ. ಸದಾ ಹವಾನಿಯಂತ್ರಿತ ಮನೆಯಂತೆ ನಮ್ಮ ಊರು. ಹೀಗಾಗಿಯೇ ಪ್ರವಾಸಿಗರಿಗಿದು ಅಚ್ಚುಮೆಚ್ಚು. ಪ್ರಕೃತಿಯಷ್ಟೇ ಇಲ್ಲಿ ಮೈತುಂಬಿಕೊಂಡವಳಲ್ಲ. ಇಲ್ಲಿನ ಹೆಮ್ಮಕ್ಕಳೂ ಬೆಡಗಿಯರೇ! ಆದರೆ ಈಗೆಲ್ಲಿ ಬೆಡಗು; ಈಗೆಲ್ಲಿ ಬಿನ್ನಾಣ? ಎಲ್ಲವೂ ನೀರುಪಾಲು; ಮಣ್ಣುಪಾಲು ಒಮ್ಮೆ ನೋಡಿ ಸಾಯೋಣವೆಂದು ಹೀಗೆ ಬಂದೆ. ಸುತ್ತ ನೋಡುತ್ತಿದ್ದೇನೆ.

**ಭಾಮಿನಿ–ಮೋಹನ**

ಬಂದ ಭೂಸುರನಡಿಗೆರಗಿ, ಜನ
ಸಂತ್ರಸ್ತರು ನೊಂದು ನುಡಿದರು; ನೀವಿದೇತಕೆ
ಬಂದಿರಿಲ್ಲಿಗೆ? ಏತಕೀ ದುಸ್ಥಿತಿಯು ನಮಗೀಗ ॥
ಹಿಂದೆ ಮಾಡಿದ ಕರ್ಮಫಲವೇ!
ಮುಂದೆ ಬಹ ದುರ್ದಿನದ ತೋರ್ಕೆಯೆ?
ಒಂದನುಳಿಯದೆ ತಿಳುಹಿ, ಬೆಳಕನು ತೋರಿ ಬಾಳುವೆಗೆ ॥ ೧ ॥

ಅಯ್ಯಾ ಬ್ರಾಹ್ಮಣರೆ, ತಮಗೆ ದೀರ್ಘದಂಡ ಪ್ರಣಾಮಗಳು. ನಿಮ್ಮನ್ನು ನೋಡಿದರೆ ಕೈಕಾಲು ನಡುಗುತ್ತಿದೆ. ನೀವೇಕೆ ಇಲ್ಲಿಗೆ ಬಂದಿರಿ? ನೀವೂ ನಮ್ಮಂತೆ ಅನಾಥರೆ? ನಾವು ಹೀಗೆ ಕೇಳುತ್ತಿರುವುದಕ್ಕೆ ಕ್ಷಮೆಯಿರಲಿ. ಸ್ವಾಮಿ, ನಮ್ಮನಾಡಿಗೆ ಏಕಿಂತಹ ಪಾಡಾಯಿತು? ನಾವು ಮಾಡಿದ ಕರ್ಮದಫಲವೆ? ಅಲ್ಲ; ಮುಂದೆ ಬರಲಿರುವ ಕೆಡುಗಾಲದ ತೋರಿಕೆಯೆ? ತಾವು ಎಲ್ಲವನ್ನು ಬಲ್ಲವರು. ಕೃಪೆ ಮಾಡಿ ಎಲ್ಲವನ್ನೂ ತಿಳಿಸಿ, ನಮ್ಮ ಬಾಳಿಗೆ ಬೆಳಕು ಕೋರಬೇಕಾಗಿ ಪ್ರಾರ್ಥಿಸುತ್ತೇವೆ.

**ಬೇಗಡೆ–ಅಷ್ಟ**

ಚಿರಋಣಿಯು ನೀವಿತ್ತ ಗೌರವಕೆ। ಈಗೀಗಲೆನ್ನಯ
ಮರೆವು ಹೆಚ್ಚುತಲಿಹುದು ದಿನದಿನಕೆ॥
ವೃದ್ಧ ಬ್ರಾಹಣ ನೆರೆಯ ಊರಿನ ಪದ್ಮನಾಭನು
ಪರಿಕಿಸಲು ದೈವಜ್ಞ ಪ್ರಾಜ್ಞನು
ಕರೆಸಿಕೊಂಡವನನ್ನುಯಿಲ್ಲಿಗೆ
ಅರಿತುಕೊಂಬುದು ವಿಹಿತವಾಗಿದೆ ॥ ೧ ॥

ಅಯ್ಯಾ, ನೀವು ನನ್ನಲ್ಲಿರಿಸಿದ ಗೌರವಕ್ಕೆ ಕೃತಜ್ಞತೆಗಳು. ನಾನು ಒಂದಿಷ್ಟುಕಾಲ ಜ್ಯೋತಿಷ ಹೇಳುತ್ತಿದ್ದೆ. ಆದರೆ ಇತ್ತೀಚಿಗೆ ಮರೆವು ಹೆಚ್ಚಾಗಿರುವುದರಿಂದ ಹೇಳುವುದನ್ನು ಬಿಟ್ಟಿದ್ದೇನೆ. ಹೀಗೆಂದ ಮಾತ್ರಕ್ಕೆ ನಿಮ್ಮನ್ನು ನಿರಾಶೆ ಗೊಳಿಸುವುದಿಲ್ಲ. ನಮ್ಮ ನೆರೆಯೂರಲ್ಲಿ ಪದ್ಮನಾಭ ಶರ್ಮರೆಂಬ ದೈವಜ್ಞರಿದ್ದಾರೆ. ಸಮಕಾಲೀನ ದೈವಜ್ಞರಲ್ಲಿ ಅವರಿಗೆ ಅಗ್ರಸ್ಥಾನ. ಇಷ್ಟಲ್ಲದೆ, ಅವರಿಗೆ ವಾಕ್‌ಸಿದ್ಧಿಯೂಯಿದೆ, ಅವರನ್ನು ಗೌರವದಿಂದ ಕರೆಯಿಸಿಕೊಂಡು ತಿಳಿಯೋಣ. ಇದರೊಂದಿಗೆ.............

ಕರೆಸಿ ಭೂವಿಜ್ಞಾನಿಗಳ ಜೊತೆಗೆ। ಅವರಿದ್ದರೊಳ್ಳಿತು
ಪರಿಕಿಸಲು ಸತ್ಯಾರ್ಥಶೋಧನೆಗೆ ॥
ಬರಲಿ ವೈಚಾರಿಕರು, ನಾಡಿನ।
ಹಿರಿಯರೆಮ್ಮೊಡನಿರಲು ಬೇಹುದು,
ಸರುವಜನ ಸಮ್ಮುಖದಿ ಬಂದಿಹ
ದುರಿತಗಳ ಕಾರಣವನರಿಯುವ ॥ ೧ ॥

ಅಯ್ಯಾ, ಜ್ಯೋತಿಷವೆಂಬುದು ಒಂದು ಶಾಸ್ತ್ರ. ಅದೆಂದಿಗೂ ಸುಳ್ಳಾಗಲಾರದು. ಅರೆಬರೆತಿಳಿದವರು ಜ್ಯೋತಿಷವನ್ನು ವ್ಯವಹಾರವನ್ನಾಗಿ ಮಾಡಿಕೊಂಡು ಏನೇನೋ ಹೇಳಿದರು. ಇದರೊಂದಿಗೆ ಬಹುಜನ ಜ್ಯೋತಿಷವನ್ನು ನಂಬುವುದಿಲ್ಲ; ಎಲ್ಲವೂ ಸುಳ್ಳೆನ್ನುತ್ತಾರೆ. ಪ್ರಕೃತ ನಮಗಿದು ಮುಖ್ಯವಲ್ಲ. ಈಗೀಗ ಕಾಲಜ್ಞಾನಿಗಳಾದ ಭೂವಿಜ್ಞಾನಿಗಳಿದ್ದಾರೆ, ಹವಾಮಾನ ತಜ್ಞರಿದ್ದಾರೆ. ಅವರು ಶೋಧನೆಯಿಂದ ಹೇಳುವವರು. ಹೀಗಾಗಿ ಅವರನ್ನು ಕರೆಯಿಸಿ. ವಿಚಾರವಾದಿಗಳು ನಮ್ಮೊಂದಿಗಿರಲಿ.ಊರಿನ ಹಿರಿಯರಂತೂ ಬೇಕೆಬೇಕು. ಎಲ್ಲರ ಸಮ್ಮುಖದಲ್ಲಿ ತಿಳಿದು ನೋಡೋಣ.

****

### ಕಲ್ಯಾಣಿ – ಝಂಪೆ

**ದೈವಜ್ಞ** ಪರಿಕಿಸಲು ಪಂಚಭೂತಂಗಳ ಪ್ರಕೋಪವಿದೆ
ಹರಿಹರರ ಮುನಿಸಿಲ್ಲ, ಗುರುಕೋಪವಿಲ್ಲ॥
ನರರ ದುಸ್ಸಾಹಸಕೆ ಯಿದುವೆ ಮುನ್ನೆಚ್ಚರಿಕೆ
ಅರಿತುನಡೆದರೆ ಚೆನ್ನ, ಸಂದೇಹ ಸಲ್ಲ॥

ಅಯ್ಯಾ ಪೃಚ್ಛಕರೆ, ಪ್ರಶ್ನೆಯಲ್ಲಿ ತೋರಿಬಂದಂತೆ–ಮುಖ್ಯವಾಗಿ ಪಂಚಭೂತಗಳು ನೊಂದಿದ್ದಾವೆ. ಮಣ್ಣು, ನೀರು, ಬೆಂಕಿ, ಗಾಳಿ ಮತ್ತು ಗಗನಗಳೇ ಪಂಚಭೂತಗಳು. ಪಂಚಭೂತಗಳಿರದೆ ಈ ಪ್ರಪಂಚವಿಲ್ಲ. ಮನುಷ್ಯರು ಕೆಲವೊಮ್ಮೆ ತಿಳಿಯದೆ, ಹಲವೊಮ್ಮೆ ತಿಳಿದು ಪಂಚಭೂತಗಳ ಮೇಲೆ ಆಕ್ರಮಣ ಮಾಡಿದ್ದಾರೆ ನೀವಿಂದು ಪರಿಸರ ಮಾಲಿನ್ಯವೆನ್ನುತ್ತೀರಿ. ಪಂಚಭೂತಗಳೇ ಪರಿಸರ. ಇವನ್ನು ಹಾಳುಮಾಡಿದ್ದು ಮನುಷ್ಯರೇ. ಮನುಷ್ಯರ ಅತ್ಯಾಶೆ ಹೆಚ್ಚಿತು. ಅತ್ಯಾಶೆಯೆಂಬುದಕ್ಕಿಂತ ದುರಾಶೆಯೆನ್ನುವುದೇ ಸರಿ. ಪರಿಸರ ಮಾಲಿನ್ಯದಿಂದ ಮನುಷ್ಯರಷ್ಟೇ ಕಷ್ಟವನ್ನು ಅನುಭವಿಸುತ್ತಿಲ್ಲ, ಜೀವರಾಶಿಗಳೆಲ್ಲ ನಾಶವಾಗುತ್ತಿವೆ. ಪರಿಸರವಿಜ್ಞಾನಿಗಳು ಹೇಳಿದರೂ ನೀವು ಗಮನಿಸಲಿಲ್ಲ. ಅದರ ಫಲವನ್ನೀಗ ಕಾಣುತ್ತೀರಿ, ಅನುಭವಿಸುತ್ತಿದ್ದೀರಿ. ಆದರೆ ದೇವರ ಮುನಿಸಿಲ್ಲ, ಗುರುಗಳ ಶಾಪವಿಲ್ಲ, ಈಗ ಉಂಟಾದ ಅನಾಹುತಗಳು ಮನುಷ್ಯರನ್ನು ಎಚ್ಚರಿಸಲಿಕ್ಕಾಗಿ. ಈಗ ತೋರಿಬಂದುದು ಹತ್ತರಲ್ಲಿ ಒಂದು ಭಾಗ ಮಾತ್ರ. ಮನುಷ್ಯರು ಇನ್ನಾದರೂ ಪರಿಸರ ಮಾಲಿನ್ಯವೆಸಗದಿದ್ದರೆ ಬದುಕುಂಟು, ಇಲ್ಲವಾದರೆ ಅಳಿವುಂಟು! ಭೂವಿಜ್ಞಾನಿಗಳೇ ನೀವೇನು ಹೇಳುತ್ತೀರಿ?

### ಕಲ್ಯಾಣಿ ಝಂಪೆ

**ಭೂ ವಿಜ್ಞಾನಿ** ಸಂದೇಹವಿಲ್ಲಿದಕೆ, ನಾವಿದನು ಹೇಳಿದರೆ
ಮಂದಮತಿಗಳು ಮಾತ ಕೇಳಲಿಲ್ಲ॥
ಮುಂದಾದರಿದನರಿತು ಆಕ್ರಮಣ ನಿಲಿಸಿದರೆ
ಬಂದಪುದು ಸುಖಶಾಂತಿ ಸಟೆಯಿದಲ್ಲ ॥ ೨ ॥

ದೈವಜ್ಞರ ಮಾತಿಗೆ ಪೂರ್ಣಸಹಮತವಿದೆ. ಕಳೆದ ಅರ್ಧಶತಮಾನದಿಂದೀಚೆ ನಾವಿದನ್ನು ಸಂದರ್ಭಸಿಕ್ಕಾಗೆಲ್ಲ ಹೇಳುತ್ತ ಬಂದಿದ್ದೇವೆ. ಸರಕಾರಕ್ಕೆ ವರದಿ ಸಲ್ಲಿಸಿದ್ದೇವೆ. ಸರಕಾರ ಜನರನ್ನು ಎಚ್ಚರಿಸುತ್ತಿದೆ. ಜೊತೆಯಲ್ಲಿ ಪ್ರತಿವರ್ಷ ವನಮಹೋತ್ಸವ ಆಚರಿಸುತ್ತಿದೆ. ಆದರೆ ವನಮಹೋತ್ಸವ ಒಣ–ಮಹೋತ್ಸವವಾಗಿದೆ. ಅರಣ್ಯಗಳ ರಕ್ಷಣೆಗಾಗಿ ಸರಕಾರ ಪ್ರತ್ಯೇಕವಾದ ಇಲಾಖೆಯನ್ನು ರಚಿಸಿದೆ. ಇಲಾಖೆಯಲ್ಲಿ ಸಚಿವರಿದ್ದಾರೆ; ಅಧಿಕಾರಿಗಳಿದ್ದಾರೆ. ಅರಣ್ಯ ರಕ್ಷಣೆಗಾಗಿ ಬಹುದೊಡ್ಡ ಪಡೆಯಿದೆ. ಆದರೆ ಕಾಡು ದಿನದಿಂದ ದಿನಕ್ಕೆ ನಾಶವಾಗುತ್ತಿದೆ. ಯಾರ ಮಾತನ್ನು ಯಾರು ಕೇಳುತ್ತಾರೆ? ಮನುಷ್ಯರಿಗೆ ಪ್ರಕೃತಿ ಕಲಿಸುವ ಪಾಠವೇ ಎಲ್ಲಕ್ಕಿಂತ ದೊಡ್ಡದು ಈ ಭೂಕುಸಿತಕ್ಕೆ, ಚಂಡಮಾರುತಕ್ಕೆ ಅನಾವೃಷ್ಟಿಗೆ ಪರಿಸರಮಾಲಿನ್ಯವೇ ಕಾರಣ. ಇನ್ನಾದರೂ ಮನುಷ್ಯರು ಜಾಗೃತರಾಗಲಿ. ಇಲ್ಲವಾದರೆ ಸರ್ವನಾಶ ಖಂಡಿತ. 'ಪ್ರಕೃತಿಯಾರಾಧನೆಯೆ ಪರಮನಾರಾಧನೆಯು, ಪ್ರಕೃತಿಯೊಲ್ಮೆಯೆ ಮುಕ್ತಿಯಾನಂದ ಸಾಧನವು' ಎಂಬುದನ್ನು ಮನುಷ್ಯ ತಿಳಿದು ಬದುಕಲಿ. ದೈವಜ್ಞರೇ, ನಿಮ್ಮ ಸ್ಪಷ್ಟ ಅಭಿಪ್ರಾಯಕ್ಕೆ ನಾವು ಕೃತಜ್ಞರಾಗಿದ್ದೇವೆ. ಹವಾಮಾನ ತಜ್ಞರೇ ನಿಮ್ಮ ಅಭಿಪ್ರಾಯವೇನು.

**ಕಲ್ಯಾಣಿ– ಝಂಪೆ**

**ಹವಾಮಾನ ತಜ್ಞರು**

ದಿನದಿನದ ಏರಿಳಿತ ತಾಪಮಾನಂಗಳಿಗೆ
ಮನುಜರೇ ಕಾರಣರು; ಎರಡು ಮಾತಿಲ್ಲ ॥
ಕೊರಳೆತ್ತಿ ಸಾರಿದೆವು ನಾವಿದನು ಜನಗಳಿಗೆ
ಪರಿತಪಿಸುತಿಹರಿಂದು; ದುಃಖವೆಮಗಿಲ್ಲ ॥ ೩ ॥

ಹೌದು, ದಿನದಿನದ ತಾಪಮಾನದ ಏರಿಳಿತಕ್ಕೆ, ಋತುಮಾನಗಳ ವ್ಯತ್ಯಾಸಕ್ಕೆ ಪ್ರಕೃತಿ ಕಾರಣವಲ್ಲ. ಪರಿಸರವನ್ನು ನಾಶ ಮಾಡುತ್ತಿರುವ ಮನುಷ್ಯರೇ ಕಾರಣರು. ನಾವಿದನ್ನು ಕೊರಳೆತ್ತಿ ಸಾರಿದ್ದೇವೆ. ನಮ್ಮ ಮಾತು ನೀರ ಮೇಲಿಟ್ಟ ಹೋಮದಂತಾಯಿತು. ಈಗ

ನೊಂದವರಿಗಾಗಿ ನಮ್ಮ ಕಣ್ಣೀರಿಲ್ಲ. ಯಾರೇ ಆಗಲಿ, ಏನ್ನನ್ನು ಬಿತ್ತುತ್ತಾರೋ ಅದಕ್ಕನುಗುಣವಾದ ಫಲವನ್ನು ಪಡೆಯುತ್ತಾರೆ. ನಿಮ್ಮ ಮಾತಿಗೆ ನಮ್ಮ ಸಹಮತವಿದೆ.

**ದೈವಜ್ಞ:** ಅಯ್ಯಾ ಪೃಚ್ಛಕರೆ, ಈಗಲಾದರೂ ಅರ್ಥವಾಯಿತಲ್ಲ. ಸುಖಶಾಂತಿಯಿಂದ ಬದುಕಬೇಕೆಂದಿದ್ದರೆ ನಮ್ಮ ಮಾತಿನಂತೆ ನಡೆಯಿರಿ. ಇಲ್ಲವಾದರೆ ನೀವುಂಟು; ನಿಮಗೆ ಬುದ್ಧಿ ಕಲಿಸಲು ಪಂಚಭೂತಗಳುಂಟು!

**ಎಲ್ಲರೂ:** ನಾವು ಪಂಚ ಭೂತಗಳಲ್ಲಿ ಕ್ಷಮೆ ಕೇಳುತ್ತೇವೆ.

**ಸಾವೇರಿ–ರೂಪಕ**

ಮನ್ನಿಪುದೆಮ್ಮಪರಾಧ ಶತಕಗಳ
ಮನ್ನಿಸಿ ನೆಲ ಜಲ ಅಗ್ನಿಗಳೇ ॥
ಮನ್ನಿಸಿ ಕಾವುದು ನೋವನು ಮರೆಯುತ
ಮನ್ನಿಸಿ ಮಾರುತ ಗಗನಗಳೇ ॥ ೧ ॥

ಅಮ್ಮಾ, ನಾವು ನಿನ್ನನ್ನು ಕೇವಲ ನೆಲವೆಂದು ಬಗೆದುವು. ಹೊಲಸು ತುಂಬಿದೆವು. ಮರಗಳನ್ನು ಕಡಿಕಡಿದು ಸವಕಲಿಗೆ ಕಾರಣವಾದೆವು. ಹೆಚ್ಚು ಬೆಳೆ ಪಡೆಯಲೆಂದು ರಾಸಾಯನಿಕ ಗೊಬ್ಬರ ಹಾಕಿದೆವು. ಎರಡು ಮೂರುವರ್ಷ ಚೆನ್ನಾಗಿ ಬೆಳೆಬಂತು. ಮತ್ತೆ ಬೆಳೆಗೆ ಕ್ರಿಮಿಕೀಟ ಬಾರದಂತೆ ಕೀಟನಾಶಕ ದ್ರವಗಳನ್ನು ಹಾಕಿದೆವು. ಮತ್ತೆ ಮೊದಲಿನ ಬೆಳೆಯೂ ಕಾಣದಾಯಿತು ಇದರೊಂದಿಗೆ, ಮಿತಿಮೀರಿ ಪ್ಲಾಸ್ಟಿಕ್ ಚೀಲಗಳನ್ನು ಉಪಯೋಗಿಸಿ, ನಿನ್ನೊಡಲಿಗೆ ಹಾಕಿದೆವು. ಪ್ಲಾಸ್ಟಿಕ್ ನಿನ್ನೊಡಲಲ್ಲಿ, ನೀರಿನಲ್ಲಿ ಕರಗಲಿಲ್ಲ. ಅದನ್ನು ಪ್ರಾಣಿಗಳು ತಿಂದು ಸತ್ತವು. ಪರಿಸರವಾದಿಗಳು ಹೇಳಿದರೂ ನಾವು ಕೇಳಲಿಲ್ಲ ಅಮ್ಮಾ ನಮ್ಮಿಂದಾಗಿ ನೊಂದೆಯಾ, ಕ್ಷಮಿಸಮ್ಮಾ ಕ್ಷಮಿಸು.

**ಧನಿಕ :** ಓ ಜಲವೇ, ನೀನು ಜೀವಿಗಳ ಜೀವನಾಧಾರವೆಂದು ತಿಳಿದಿದ್ದರೂ, ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿ, ಅವುಗಳ ವಿಷದ ನೀರನ್ನು ನಿನ್ನ ಒಡಲಿಗೆ ಹಾಕಿದೆವು. ಇದಲ್ಲದೆ ಕಸದ ರಾಶಿ ತಂದು ಹಾಕಿದೆವು. ಹೆಚ್ಚೇಕೆ; ಸತ್ತ ಹೆಣವನ್ನು ಹಾಕಿದೆವು. ಪರಿಣಾಮವಾಗಿ ಶುದ್ಧ ನೀರು ಸಿಗದಾಯಿತು. ಅಮ್ಮಾ ನಮ್ಮಲ್ಲಿ ಮುನಿಸಿಕೊಳ್ಳಬೇಡಮ್ಮಾ, ಕ್ಷಮಿಸು, ಇದರಜೊತೆಯಲ್ಲಿ ಅಗ್ನಿ ಮಾಲಿನ್ಯವೂ ನಮ್ಮಿಂದಾಯಿತು. ಅಗ್ನಿದೇವಾ ನೀನಿಲ್ಲದೆ ಶಾಖವೆಲ್ಲಿ? ಬೆಳಕೆಲ್ಲಿ? ನಿನ್ನ ತೇಜಕ್ಕೂ ಮಲಿನತೆ ತಂದ ನಮ್ಮನ್ನು ಕ್ಷಮಿಸು ತಂದೆಯೇ ಕ್ಷಮಿಸು.

**ಸಂತ್ರಸ್ತೆ:** ಓ ವಾಯುದೇವ ನೀ ನಿಲ್ಲದೆ ಬದುಕಿಲ್ಲ. ನೀನು ಕಣ್ಣಿಗೆ ಕಾಣಲಾರೆಯೆಂದು ವಾಯು ಮಂಡಲವನ್ನು ಕೆಡಿಸಿದೆವು. ಕ್ಷಮಿಸು ತಂದೆಯೇ, ಕ್ಷಮಿಸು


**ಫಕೀರ:** ಅಯ್ಯಾ ಆಕಾಶವೇ, ಈಗ ಗೊತ್ತಾಯಿತು ದಿನದಿಂದ ದಿನಕ್ಕೆ ನಿನ್ನ ತಾಪ ಹೆಚ್ಚುತ್ತಿರುವುದೇಕೆಂದು. ನಮ್ಮ ದುಷ್ಕೃತ್ಯದಿಂದಾಗಿ ತಾಪ ಮಾನದ ಏರಿಳಿತ. ನಿರ್ಲಿಪ್ತನಾದ ನಿನ್ನ ಮೇಲೂ ಆರೋಪ ಹೊರಿಸಿದವರು ನಾವು. ಕ್ಷಮಿಸು ತಂದೆಯೇ, ಕ್ಷಮಿಸು.

**ವೃದ್ಧ ಬ್ರಾಹ್ಮಣ:** ಆದುದು ಆಗಿ ಹೋಯಿತು. ಇನ್ನಾದರೂ ಎಚ್ಚರವಾಗಿದ್ದು ಬದುಕೋಣ ಜೀವರ ಒಳಿತಿಗಾಗಿ ಮಂಗಲ ಹಾಡೋಣ.

**ಮಂಗಲ ಪದ ಮೋಹನ –ಅಷ್ಟ**

ಮಂಗಲಂ ಜಯ। ಮಂಗಲಂ ಶುಭ
ಮಂಗಲಂ ಭೂ ಮಾತೆಗೆ ॥
ಮಂಗಲಂ ॥ ಜಲ ಅಗ್ನಿ ಮಾರುತ
ಮಂಗಲಂ ಆಕಾಶಕೆ ॥ ೧ ॥

***



'ಪಂಚಭೂತ ಪ್ರಪಂಚ' ಎಂಬುದು ಅಂಬಾತನಯ ಮುದ್ರಾಡಿ ಅವರ ಕವಿಹೃದಯ 2018ರ ಮುಂಗಾರು ಮಳೆಯಲ್ಲಾದ ಜಲ ಪ್ರಳಯದ ಬಗೆಗೆ ಹೊಂದಿದ ಪ್ರತಿಸ್ಪಂದನದ ಪ್ರತಿಬಿಂಬ. ಇದೊಂದು 'ಗೀತರೂಪಕ' ಬಹುಶ: ಶಾಲೆ ಶಾಲೆಗಳಲ್ಲೂ ಮಕ್ಕಳಲ್ಲಿ ಪರಿಸರ ಪ್ರೀತಿಯನ್ನು ಬಿತ್ತಲು ಅನುಕೂಲಿಸುವ ಉತ್ತಮ ರಂಗಕೃತಿ. ಇದಕ್ಕೆ ಕವಿ ಆಯ್ದುಕೊಂಡಿರುವ ಮಾಧ್ಯಮ ಯಕ್ಷಗಾನದ ಪದಬಂಧಗಳು ಯಕ್ಷಗಾನದ ಪರಿಕರಗಳನ್ನು ಬಳಸಬಹುದಾದ, ಬೇರೆ ರಂಗತಂತ್ರಗಳ ಮೂಲಕವೂ ಅಭಿನಯಿಸಬಹುದು. ರೂಪಕ ಕೃತಿ ಇದು.

ಅವರಲ್ಲಿ ಕಾವ್ಯ ರಚನಾ ಶಕ್ತಿ ಅಪಾರವಾಗಿದೆ. ಸುಮಾರು ನಲ್ವತ್ತೆರಡು ಪದಗಳು, ಅದಕ್ಕೆ ಅವರೇ ರಚಿಸಿದ ಸಂಭಾಷಣೆ ಪರಿಸರ ಮಾಲಿನ್ಯದ ಬಗೆಗೆ ಜನಜಾಗೃತಿ ಮೂಡಿಸಲು ಯೋಗ್ಯ ಮಾಧ್ಯಮವಾದ ರೂಪಕವಾಗಿ ನಮ್ಮ ಕೈಗೆ ಬಂದಿದೆ. ಅದನ್ನು ಮನಮನದಲ್ಲೂ, ಶಾಲೆ, ಯುವಕ ಸಂಘ, ರಂಗ ಸಂಸ್ಥೆಗಳಲ್ಲೂ ಯುಕ್ತ ಸಂಗೀತ, ನಾಟ್ಯ ಸಂಯೋಜನೆಯೊಂದಿಗೆ ಕಾಯ್ದುಕೊಳ್ಳೋಣ.

ಕೆ.ಎಂ.ರಾಘವ ನಂಬಿಯಾರ್